ಸಂಪುಟ 01 | ಸಂಚಿಕೆ 42 | ಮಂಗಳವಾರ 23 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1.ಕಿಸಾನ್ ದಿವಸ್ – ರಾಷ್ಟ್ರೀಯ ರೈತರ ದಿನ Kisan Diwas ? National Farmers' Day

ಈ ದಿನವನ್ನು ಭಾರತದಲ್ಲಿ 'ಕಿಸಾನ್ ದಿವಾಸ್' / 'ನ್ಯಾಷನಲ್ ಫಾರ್ಮರ್ಸ್ ಡೇ' ಆಗಿ ಆಚರಿಸಲಾಗುತ್ತದೆ ರಾಷ್ಟ್ರೀಯ ರೈತರ ದಿನ ಎಂದು ಗುರುತಿಸಲಾಗಿದೆ. ಇದನ್ನು ರೈತರ ಮಹತ್ವವನ್ನು ಮತ್ತು ಅವರ ಅಡಿಕೆ, ಕೃಷಿ ಮತ್ತು ಆಹಾರ-ಭದ್ರತೆ ಕ್ಷೇತ್ರದಲ್ಲಿ ಕೊಡುಗೆಯನ್ನು ಪ್ರತ್ಯೇಕವಾಗಿ ಸ್ಮರಿಸಲು ಆಚರಿಸಲಾಗುತ್ತದೆ. ಈ ದಿನವು ಭಾರತದ 5ನೇ ಪ್ರಧಾನಮಂತ್ರಿ ಚೌಧರಿ ಚರಣ್ ಸಿಂಗ್ ಅವರ ಜನ್ಮಾಂಕಿತ ದಿನ (23 ಡಿಸೆಂಬರ್) ಆಗಿರುವುದರಿಂದ ಆಯ್ಕೆ ಮಾಡಲಾಗಿದೆ. ಹೋರಾಟ, ಅಭಿವೃದ್ಧಿ ಮತ್ತು ಸಮೃದ್ಧ ಕೃಷಿ ನಿಟ್ಟಿನಲ್ಲಿ ಈ ದಿನ ರೈತರಿಗೆ ಗೌರವ ಸಲ್ಲಿಸೋದಕ್ಕೆ, ಕೃಷಿ-ಜಾಗೃತಿ ಕಾರ್ಯಕ್ರಮಗಳನ್ನು, ಸೆಮಿನಾರ್‌ಗಳು, ಸಸಿಕಾಯಿತ ಕಾರ್ಯಾಗಾರಗಳು ಹಾಗೂ ಸಭಾಪ ಕರಣಗಳು ಆಯೋಜಿಸಲಾಗುತ್ತದೆ.

## ಸುಭಾಷಿತ

ನಿಮ್ಮ ಭವಿಷ್ಯವನ್ನು ಭವಿಷ್ಯದಲ್ಲಿ ಸುಧಾರಿಸಿಕೊಳ್ಳಲು ಸಾಧ್ಯವಿಲ್ಲ. ಆ ಕೆಲಸ ಈಗಿನಿಂದಲೇ ಆರಂಭವಾಗಬೇಕು.

ವಿವೇಕ್ ಬಿಂದ್ರಾ

# ಜನರ ಮನರಂಜನೆಗಾಗಿ ನಿತ್ಯವೂ ಸಿಎಂ ಕುರ್ಚಿ ಕದನ ನಡೆಯುತ್ತಿದೆ :ಹೆಚ್ಡಿಕೆ ವ್ಯಂಗ್ಯ

**ಚಿಕ್ಕಮಗಳೂರು: ಜನರ ಮನರಂಜನೆಗಾಗಿ ನಿತ್ಯವೂ ಮುಖ್ಯಮಂತ್ರಿ ಗಾದಿ ಕುರ್ಚಿ ಫೈಟ್ ನಡೆಯುತ್ತಿದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.**

ಬಾಳೆಹೊನ್ನೂರಿನಲ್ಲಿ ಕಾಫಿ ಸಂಶೋಧನಾ ಕೇಂದ್ರಕ್ಕೆ 100 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಹಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಿನಬೆಳಗಾದರೆ ಮುಖ್ಯಮಂತ್ರಿ ಕುರ್ಚಿಗಾಗಿ ಹೋರಾಟ ನಡೆಯುತ್ತಿದ್ದು, ಅದರ ಉಸಾಬರಿ ನಮಗೇಕೆ ಬೇಕು?, ರಾಜ್ಯದ ಅಭಿವೃದ್ಧಿಯಾದರೆ ಅಷ್ಟೇ ಸಾಕು ಎಂದು ಹೇಳಿದರು. ಮುಖ್ಯಮಂತ್ರಿ ಯಾರಾದರೂ ಆಗಲಿ. ಜನರ ಸಮಸ್ಯೆಗಳು ಬಗೆಹರಿದು ರಾಜ್ಯದ ಅಭಿವೃದ್ಧಿಯಾಗಬೇಕು. ರಾಜ್ಯಸರ್ಕಾರಕ್ಕೆ 3 ವರ್ಷವಾಗುತ್ತಾ ಬಂದಿದೆ. ರೈತರ ಪರಿಸ್ಥಿತಿ ಕಷ್ಟಕರವಾಗಿದೆ.



ಇಂತಹ ಪರಿಸ್ಥಿತಿಯಲ್ಲಿ ಜನರ ಸಮಸ್ಯೆನಿವಾರಿಸಿ ರಾಜ್ಯದ ಅಭಿವೃದ್ಧಿಯಾಗಬೇಕೇ ಹೊರತು ಮುಖ್ಯಮಂತ್ರಿ ಯಾರಾದರೆ ನಮಗೇನು? ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಲು 47 ಕೋಟಿ ರೂ. ವೆಚ್ಚವಾಗಿದೆಯಂತೆ. ರಸ್ತೆಗಳನ್ನು ನೋಡಿದರೆ ರಾಜ್ಯದ ಅಭಿವೃದ್ಧಿ ಹೇಗಾಗುತ್ತದೆ ಎಂಬುದು ಗೊತ್ತಾಗುತ್ತದೆ. ಕೆ.ಆರ್.ಪೇಟೆ ಯಿಂದ ಮೈಸೂರಿಗೆ ಪ್ರಯಾಣಿಸಲು ಅರ್ಧಗಂಟೆ ಸಮಯ ಸಾಕಾದರೂ ಹೆಲಿಕಾಪ್ಟರ್ ಬಳಸುತ್ತಾರೆ. ಕುರ್ಚಿ ಕದನದ ಬಗ್ಗೆ ನನಗೆ ಆಸಕ್ತಿ ಇಲ್ಲ ಎಂದರು.

ಮುಖ್ಯಮಂತ್ರಿ ದಾಖಲೆ ಮುಂಗಡಪತ್ರ ಮಂಡಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಪಂಚಕ್ಕೆ ಏನು ಮಾಡಬೇಕು ಅಂತಿದ್ದಾರೆ. ಅಲ್ಲಿಗೆ ಹೋಗಿ ಅವರಿಗೆ ಇವರು ಸಹಕಾರ ಕೊಟ್ಟರೆ ಒಳ್ಳೆಯದು ಎಂದು ವ್ಯಂಗ್ಯವಾಡಿದರು.

ರಾಜ್ಯದ ಜನರ ಮೇಲೆ ಯಾರು, ಎಷ್ಟು ತೆರಿಗೆ ಹಾಕಬೇಕು ಎಂದು ಓಡಾಡುತ್ತಿದ್ದಾರೆ. ದೇವರ ಜೊತೆ ಮಾತನಾಡಿದ್ದಾರಂತಲ್ಲ. 45 ದಿನ ಏನಾಗುತ್ತದೆ ನೋಡೋಣ, ಒಬ್ಬರು ಮುಂದಿನ ಮೂರನೇ ಬಜೆಟ್ ನಾನೇ ಮಂಡಿಸುವುದು ಅಂತಾರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿರುವುದರಿಂದ ಮುಂದಿನ ಬಜೆಟ್ ಅನ್ನು ಅವರೇ ಮಂಡಿಸುತ್ತಾರೆ ಎಂಬುದಿದೆ. ಅಧಿವೇಶನದಲ್ಲಿ ಹಲವು ವಿಧೇಯಕಗಳು ಚರ್ಚೆಯಿಲ್ಲದೆ ಅನುಮೋದನೆಯಾಗಿದೆ. ಸದನದಲ್ಲಿ ವಿರೋಧಪಕ್ಷಗಳಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಸಮಯ ಬಂದಾಗ ರಾಜ್ಯಸರ್ಕಾರದ ಭ್ರಷ್ಟಾಚಾರದ ಬಗ್ಗೆ ದಾಖಲೆಸಹಿತ ಮಾತನಾಡುವುದಾಗಿ ಕುಮಾರಸ್ವಾಮಿ ತಿಳಿಸಿದರು.

# ಕೆರೆ-ಕಟ್ಟೆಗಳ ಪುನಃಶ್ಚೇತನಕ್ಕೆ ಪ್ರಯತ್ನ: ಎನ್.ಎಸ್. ಬೋಸರಾಜು


❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: 'ಜಿಲ್ಲೆಯಲ್ಲಿ ಕೆರೆ-ಕಟ್ಟೆಗಳ ಸಂರಕ್ಷಣೆ ಮೂಲಕ ಅಂತರ್ಜಲ ವೃದ್ಧಿಗಾಗಿ ವೈಜ್ಞಾನಿಕ ಯೋಜನೆಗಳನ್ನು ರೂಪಿಸಲಾಗುತ್ತಿದೆ' ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್. ಬೋಸರಾಜು ತಿಳಿಸಿದರು. ನಗರದ ನೀರಭಾವಿಕುಂಟೆ ಕೆರೆಯ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು. 'ನಗರದ ಕೇಂದ್ರ ಭಾಗದಲ್ಲಿರುವ ಮಾವಿನಕೆರೆಯನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ನೀರಭಾವಿ ಕುಂಟೆ ಕೆರೆಯನ್ನು 8 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಲು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ' ಎಂದು ಹೇಳಿದರು.**



'ಸಾರ್ವಜನಿಕರು ಅಭಿವೃದ್ಧಿ ಕಾಮಗಾರಿಗಳಿಗೆ ಸಹಕರಿಸಬೇಕು ಹಂತ ಹಂತವಾಗಿ ನಮ್ಮ ಸರ್ಕಾರ ಜನಪರವಾದ ಅಭಿವೃದ್ಧಿ ಕಾಮಗಾರಿಗಳನ್ನು ವೈಜ್ಞಾನಿಕವಾಗಿ ರೂಪಿಸಲಾಗುವುದು. ಕೆರೆ ಭಾಗವನ್ನು ಒತ್ತುವರಿಯಾಗದಂತೆ ಅಧಿಕಾರಿಗಳು ಕೆರೆಯ ಸುತ್ತಲೂ ಗಡಿಭಾಗವನ್ನು ಭದ್ರಗೊಳಿಸಬೇಕು' ಎಂದು ತಿಳಿಸಿದರು. ಸಂಸದರಾದ ಜಿ ಕುಮಾರ ನಾಯಕ, ಮಾಜಿ ಶಾಸಕ ಎ. ಪಾಪರಡ್ಡಿ, ಕಾಂಗ್ರೆಸ್ ಮುಖಂಡ ಮೊಹ್ಮದ್ ಶಾಲಂ, ಕೆ ಶಾಂತಪ್ಪ, ಜಯಣ್ಣ, ಜಯವಂತ ರಾವ್ ಪತಂಗೆ, ಶ್ರೀನಿವಾಸ ರಡ್ಡಿ, ಶೇಖರ ರಡ್ಡಿ, ಜಿ ಶಿವಮೂರ್ತಿ, ಅಮರೇಗೌಡ ಹಂಚಿನಾಳ, ಮುನಿಸ್ವಾಮಿ, ಸುಭಾಷ್, ವಿಶಾಲ ರಡ್ಡಿ, ಸೇರಿ ನೀರಾವರಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ದಲಿತರಿಗೆ ಶೇ 30ರಷ್ಟು ಪ್ರಶಸ್ತಿ ಮೀಸಲಿಡಿ ಕುಂ.ವೀರಭದ್ರಪ್ಪ



❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: 'ಅಕಾಡೆಮಿ ಹಾಗೂ ರಾಜ್ಯೋತ್ಸವ ಪ್ರಶಸ್ತಿಗಳಲ್ಲಿ ಶೇ 30ರಷ್ಟು ಪ್ರಶಸ್ತಿಗಳನ್ನು ಈ ನೆಲದ ಮೂಲನಿವಾಸಿಗಳಿಗೆ ಮೀಸಲಿಡಬೇಕು' ಎಂದು ಸಾಹಿತಿ ಕುಂ.ವೀರಭದ್ರಪ್ಪ ಇಲ್ಲಿ ಒತ್ತಾಯಿಸಿದರು. ಭಾನುವಾರ ನಡೆದ ಹನ್ನೊಂದನೆಯ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಸಾಧಕರಿಗೆ ರಾಷ್ಟ್ರೀಯ ಯುವ ಪ್ರಶಸ್ತಿ ಹಾಗೂ ರಾಷ್ಟ್ರೀಯ ಪುಸ್ತಕ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.**


'ಪ್ರಾಧಿಕಾರ, ಅಕಾಡೆಮಿಗಳನ್ನು ರಚಿಸುವಾಗ ಸರ್ಕಾರ ಅವುಗಳಿಗೆ ದಲಿತ ಸದಸ್ಯರನ್ನು ನೇಮಿಸಬೇಕು. ರಾಜ್ಯದಲ್ಲಿ 30ರಷ್ಟು ಪ್ರಶಸ್ತಿಗಳನ್ನು ದಲಿತರಿಗೆ ಮೀಸಲಿಡಬೇಕು. ಈ ಮೂಲಕ ದಲಿತ ಸಮುದಾಯವನ್ನು ಜಾಗೃತಗೊಳಿಸಬೇಕು' ಎಂದು ಮನ 'ಉಪದ್ರವಿ ಸಾಹಿತಿಗಳು ನಮ್ಮ ಮಧ್ಯೆ ಇದ್ದಾರೆ. ಇಂಥವರು ನಮ್ಮನ್ನು ಉಳಿಸಲು ಸಾಧ್ಯವಿಲ್ಲ. ದಲಿತರು ಕೃತಿಗಳನ್ನು ಬರೆದದ್ದನ್ನೇ ಸಾಧನೆಯಾಗಿ ಪರಿಗಣಿಸಬೇಕು. ದಲಿತರೇ ದೇಶದ ಮೂಲನಿವಾಸಿಗಳು. ನಮಗೆ ಕಮಲ ಮುಖ್ಯವಲ್ಲ, ಕಮಲದ ಕೆಳಗಿನ ಕೆಸರು ಮುಖ್ಯ. ಕಾರಣ ಅದರ ಕೆಳಗೆ ಬ್ರಹ್ಮರಾಕ್ಷಸ ಇದ್ದಾನೆ. ಹೀಗಾಗಿ ದಲಿತ ಸಂವೇದನೆಗಳನ್ನು ರಕ್ಷಿಸುವ ಹೊಣೆ ಎಲ್ಲರ ಮೇಲಿದೆ' ಎಂದು ಪ್ರತಿಪಾದಿಸಿದರು.

# ಕವನ ಸಂಕಲನ ಬಿಡುಗಡೆ-'ಹಾರ್ವೆಸ್ಟ್ ಆಫ್ ಸ್ಟಿಲ್‌ನೆಸ್'

❑ ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಡಿ 22 ಶಿಕ್ಷಕ ವೀರಶೆಟ್ಟಿ ಅವರಾದ ಅವರು ರಚಿಸಿದ 'ಹಾರ್ವೆಸ್ಟ್ ಆಫ್ ಸ್ಟಿಲ್‌ನೆಸ್' ಕವನ ಸಂಕಲನವನ್ನು ಶರಣಬಸವೇಶ್ವರ ಸಂಸ್ಥಾನದ ಆವರಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ವಿಕಾಸ ಅಕಾಡೆಮಿ ಅಧ್ಯಕ್ಷ, ಮಾಜಿ ಸಂಸದ ಬಸವರಾಜ ಪಾಟೀಲ ಸೇಡಂ ಭಾನುವಾರ ಬಿಡುಗಡೆಗೊಳಿಸಿದರು.**

ನಂತರ ಮಾತನಾಡಿದ ಅವರು, 'ವೀರಶೆಟ್ಟಿ ಅವರು ಸಾರ್ವಕಾಲಿಕ ಸತ್ಯದ ಮೇಲೆ ನಿಂತಿರುವ ಕವಿತೆಗಳನ್ನು ಬರೆದಿದ್ದಾರೆ. ನಾವು ಬರಹಗಳ ಮೂಲಕ ವಿಚಾರಗಳನ್ನು ಸದಾ ಸತ್ಯದ ಕಡೆಗೆ ಕೊಂಡೊಯ್ಯಬೇಕು. ಆ ಕೆಲಸವನ್ನು ಕವಿ ಸಮರ್ಥವಾಗಿ ನಿಭಾಯಿಸಿದ್ದಾರೆ' ಎಂದರು. ಪುಸ್ತಕದ ಕುರಿತು ಮಾತನಾಡಿದ ಕರ್ನಾಟಕ




ಕೇಂದ್ರೀಯ ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಪ್ರೊ. ಬಸವರಾಜ ಪಿ. ಡೋಣೂರ, 'ಕವನಸಂಕಲನದಲ್ಲಿನ 50 ಕವಿತೆಗಳ ಪೈಕಿ 20 ಕವಿತೆಗಳು ಅತ್ಯುತ್ತಮವಾಗಿದೆ. ಉಳಿದ ಕವಿತೆಗಳೂ ಗುಣಮಟ್ಟದ ದೃಷ್ಟಿಯಿಂದ ಮಹತ್ವದ್ದಾಗಿವೆ. ಶೀರ್ಷಿಕೆಯಲ್ಲಿರುವ ಸೈಲೆನ್ಸ್ ಪದವು ನಿಶ್ಯಬ್ದ ಪರಿಸರವನ್ನು ಅಭಿವ್ಯಕ್ತಿಸುತ್ತದೆ. ನಿಸರ್ಗ, ಪರಿಸರ, ಭೂಮಿ, ಮಳೆಯ ಬಗ್ಗೆಯೇ ಕವಿತೆಗಳು ಸುತ್ತುವರೆಯುತ್ತವೆ' ಎಂದು ಹೇಳಿದರು.

'ಹಿಂದೆ ಆಗಿ ಹೋದ ಮಹತ್ವದ ಕವಿಗಳ ಕವನ ಸಂಕಲನಗಳಲ್ಲಿನ ಎಲ್ಲ ಕವಿತೆಗಳೂ ಅಷ್ಟೇ ಮಹತ್ವದ್ದು ಇರುತ್ತಿರಲಿಲ್ಲ. ಆ ನಿಟ್ಟಿನಲ್ಲಿ ವೀರಶೆಟ್ಟಿ ಅವರು ಕವನ ಸಂಕಲನದಲ್ಲಿ ಉತ್ತಮ ಕವಿತೆಗಳನ್ನು ತಂದಿದ್ದಾರೆ' ಎಂದು ಶ್ಲಾಘಿಸಿದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ, ಶಾಂತಕುಮಾರ ಬಿಲಗುಂದಿ, ಮಂಜುನಾಥ್, ರಾಯಚೂರು ನಟರಾಜ್ ಎಂ., ಸಿಆರ್‌ಪಿ ವಿರೇಶ್ ಪೂಜಾರಿ ಬಳ್ಳಾರಿ, ಸುಮಂಗಲಾ ರೆಡ್ಡಿ, ಶ್ರೀಕಾಂತ್ ಚವಾಣ್, ವಕೀಲರ ಸಂಘದ ಅಧ್ಯಕ್ಷ ಎಸ್.ವಿ. ಪಸಾರ ಹಾಗೂ ಕವನ ಸಂಕಲನದ ಕರ್ತೃ ವೀರಶೆಟ್ಟಿ ಅವರಾದ ಭಾಗವಹಿಸಿದ್ದರು.

# ಪೋಲಿಯೋ ಮುಕ್ತ ದೇಶದ ಕನಸು ನನಸಾಗಿಸಲು ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೆ ಲಸಿಕೆ ಹಾಕಿಸಿ:ಎನ್ ಎಸ್ ಬೋಸರಾಜು.

❑ ನೈಜ್ಯ ದೆಸೆ ನ್ಯೂಸ್

**ಪೋಲಿಯೋ ವೈರಸ್ ನಿಂದ ಜೀವನ ಪರ್ಯಂತ ಅಂಗವಿಕಲತೆ ಉಂಟು ಮಾಡುವುದನ್ನು ತಡೆಯಲು ಹುಟ್ಟಿನಿಂದ ಐದು ವರ್ಷದೊಳಗಿನ ಮಕ್ಕಳಿಗೆ ಈ ಹಿಂದೆ ಎಷ್ಟೇ ಬಾರಿ ಹಾಕಿಸಿದ್ದರೂ ಸಹ ಇಂದು ಎರಡು ಹನಿ ಪೋಲಿಯೊ ಲಸಿಕೆ ಹಾಕಿಸಿ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್. ಎಸ್. ಬೋಸರಾಜು ಜನತೆಗೆ ಕರೆ ನೀಡಿದರು.**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ, ರಿಮ್ಸ್ ಆಸ್ಪತ್ರೆ, ನವೋದಯ ವೈದ್ಯಕೀಯ ಕಾಲೇಜು, ರೋಟರಿ, ಲಯನ್ಸ್ ಕ್ಲಬ್, ರೆಡ್‌ಕ್ರಾಸ್, ಶಿಕ್ಷಣ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಹಯೋಗದಲ್ಲಿ ನಗರದ ಕೆ.ಇ.ಬಿ ಕಾಲೋನಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮವನ್ನು ಚಾಲನೆಗೊಳಿಸಿ 1994 ರಿಂದ ಅಭಿಯಾನದ ರೂಪದಲ್ಲಿ ಲಸಿಕೆ ಹಾಕುವ ಕಾರ್ಯವನ್ನು ಕೈಗೊಂಡು ನಮ್ಮ ದೇಶದಲ್ಲಿ ಕಳೆದ 14 ವರ್ಷಗಳಿಂದ ನಾವು ಯಾವುದೇ ಪ್ರಕರಣ ವರದಿಯಾಗದಂತೆ ಸರಕಾರ ಲಸಿಕೆಯನ್ನು ಹಾಕುವ ಕಾರ್ಯ ಮಾಡುತಿದ್ದು, ಪ್ರಸ್ತುತ ಜಿಲ್ಲೆಯಲ್ಲಿ 2,59,984 ಮಕ್ಕಳಿಗೆ 1,133 ಮನೆ ಬೇಟಿ ತಂಡಗಳು, 33 ಮೊಬೈಲ್ ತಂಡ, 53 ಟ್ರಾನ್ಸಿಟ್ ತಂಡಗಳ ಮೂಲಕ 248 ಮೇಲ್ವಿಚಾರಣೆಯೊಂದಿಗೆ ಲಸಿಕೆ ಹಾಕಲಾಗುತ್ತಿದೆ ಎಂದು ತಿಳಿಸಿದರು.

ರಾಯಚೂರು ಲೋಕಸಭಾ ಕ್ಷೇತ್ರದ ಸಂಸದರಾದ ಜಿ ಕುಮಾರ್ ನಾಯಕ



ಮಾತನಾಡಿ ಇತ್ತಿಚಿನ ವರ್ಷಗಳಲ್ಲಿ ಲಸಿಕೆಗಳಿಂದ ಮಕ್ಕಳ ಬಾಲ್ಯದಲ್ಲಿ ಕಾಡುವ ರೋಗಗಳನ್ನು ಪರಿಣಾಮಕಾರಿಯಾಗಿ ತಡೆಯುವ ಕಾರ್ಯ ರಾಜ್ಯ ಸರಕಾರ ಮಾಡುತ್ತಿದ್ದು, ಜನತೆ ಲಸಿಕೆಗಳ ಬಗ್ಗೆ ಯಾವುದೇ ಸಂಶಯ ವ್ಯಕ್ತಪಡಿಸದೆ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಎಲ್ಲ ಲಸಿಕೆಗಳನ್ನು ಹಾಕಿಸಿ ರಾಯಚೂರು ಜಿಲ್ಲೆಯು ಈ ದಿಸೆಯಲ್ಲಿ ಮುಂಚೂಣಿಯಲ್ಲಿರಲು ಪ್ರತಿಯೊಬ್ಬರೂ ಸಹಕರಿಸಿ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ನಿತೀಶ್ ಕೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದು, ಮಹಾನಗರ ಪಾಲಿಕೆ ಆಯುಕ್ತರು ಜುಬಿನ್ ಮೊಹೊಪಾತ್ರ, ಆರ್‌ಓ ಆರ್‌ಸಿಹೆಚ್ ಹಾಗೂ ಜಿಲ್ಲಾ ನೋಡಲ್ ಅಧಿಕಾರಿ ಡಾ ವಿಜಯೇಂದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಡಾ ಸುರೇಂದ್ರಬಾಬು, ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್, ಸರ್ವೇಕ್ಷಣಾಧಿಕಾರಿ, ಡಾ ಗಣೇಶ್ ಕೆ, ರೋಟರಿ ಸಂಸ್ಥೆಯ ತ್ರಿವಿಕ್ರಮ ಜೋಷಿ, ಮುಖಂಡರಾದ ಜಯಣ್ಣ, ಜಯವಂತರಾವ್ ಪತಂಗೆ, ಜಿಲ್ಲಾ ತಾಲೂಕಾ ಆರೋಗ್ಯಾಧಿಕಾರಿ ಡಾ ಪ್ರಜ್ವಲ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ, ಡಾ ಈರಣ್ಣ ಕೋಸಗಿ, ಶಿಶು ಅಭಿವೃದ್ಧಿ ಯೋಜನಧಿಕಾರಿ ಮಂಜುನಾಥ, ಮನ್ಸೂರ್, ವೈದ್ಯಾಧಿಕಾರಿ ಡಾ ಆಸ್ಫಾಕ್ ಹುಸೇನ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ರೇಡ್‌ಕ್ರಾಸ್ ಸಂಚಾಲಕ ಡಾ ದಂಡಪ್ಪ ಬಿರಾದಾರ, ಮಾನವ ಹಕ್ಕುಗಳ ಸಂಘಟನೆಯ ಚಂದ್ರಶೇಖರ, ಉಪಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಮುಖ್ಯ ಗುರುಗಳಾದ ರಾಜಶೇಖರ ಪಾಟೀಲ್, ಹೀರಾಲಾಲ್, ಡಿಪಿಎಮ್ ನವೀನ್, ಐಎಫ್‌ವಿ ಕೋಪ್ರೇಶ್, ಗುರು ಗಂಪಾ, ವಿಹೆಚ್‌ಎಸ್-ಎನ್‌ಸಿ ಬಸವರಾಜಗೌಡ, ಅರುಣ್ ಸೇರಿದಂತೆ ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ರೋಟರಿ, ಲಯನ್ಸ್, ಸೇರಿದಂತೆ ಸಂಘ- ಸಂಸ್ಥೆಗಳ ಪದಾಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಗೆಳತಿ ಕವಿತೆಯೆಂದರೆ...

ಮುಂಜಾನೆ ಬಾನಿನ ಕೆಂಪು
ಬಿರಿದ ಮಲ್ಲಿಗೆಯ ಕಂಪು
ಸುರಿವ ಚಂದ್ರಕಾಂತಿ ತಂಪು
ಕೋಗಿಲೆ ಸುಸ್ವರದ ಇಂಪು.!

ಗೆಳತಿ ಕವಿತೆಯೆಂದರೆ...
ಮಿನುಗುವ ಇಬ್ಬನಿ ಮುತ್ತು
ಸುಮದ ಮಕರಂದ ತುತ್ತು
ಸಾಗರದಾಳದ ಸಿರಿ ಸೊತ್ತು
ಆ ಕಾಮನಬಿಲ್ಲಿನ ಹೊತ್ತು.!

ಗೆಳತಿ ಕವಿತೆಯೆಂದರೆ...
ಕಡಲ ಅಲೆಗಳ ಭವ್ಯ ನರ್ತನ
ಹೊನಲ ಮಂಜುಳ ಕೀರ್ತನ
ದೇಗುಲದ ದಿವ್ಯ ಮಂತ್ರಗಾನ
ಮುಗಿಲ ಮೇಲಿನ ರಮ್ಯಯಾನ

ಗೆಳತಿ ಕವಿತೆಯೆಂದರೆ...
ಮುಸ್ಸಂಜೆ ಮೋಡದ ಚಿತ್ತಾರ
ಮಯೂರ ನಾಟ್ಯದ ಸಹಸ್ರಾರ
ಮಾರುತಕೆ ತೂಗುವ ಮಂದಾರ
ರತಿ-ಮನ್ಮಥರ ಪ್ರೇಮಶೃಂಗಾರ.!

ಗೆಳತಿ ಕವಿತೆಯೆಂದರೆ...
ಅಮ್ಮನ ಮಡಿಲಿನ ಜೋಗುಳ
ಒಲಿದ ಒಡಲಿನ ಯುಗಳ
ಕಂದನ ಕಂಗಳಿನ ತಿಂಗಳ
ಹೃದ್ಯ ವೀಣೆಯ ರಾಗತಾಳ.!

ಗೆಳತಿ ಕವಿತೆಯೆಂದರೆ...
ಕೋಟಿಭಾವಗಳ ರಾಗಲಹರಿ
ಸಹಸ್ರಚೈತನ್ಯಗಳ ಜೀವಪ್ರಹರಿ
ಅನಂತ ಒಲವಿನ ಮಾಯಾಭೇರಿ
ಶ್ಯಾಮನುಸುರಿನ ದೇವಬಾಸುರಿ.!

ಗೆಳತಿ ನನಗೆ ಕವಿತೆಯೆಂದರೆ..
ಜಗದ ಸಮಸ್ತ ಚೆಲುವಿನ ಸಾರ
ಕವಿಯ ಗೆಲುವಿನ ಅನನ್ಯ ಹಾರ
ಎದೆಗಳ ಬೆಸೆವ ಅಪೂರ್ವ ದಾರ
ಮನದಂಗಳ ಬೆಳಗುವ ನಕ್ಷತ್ರತಾರ.!

ಎ.ಎನ್.ರಮೇಶ್. ಗುಬ್ಬಿ

## ನೇತ್ರದಾನ ದೇಹ ದಾನ ಮಾಡಿ ಸಾವಿನಲ್ಲಿಯೂ ಕೂಡ ಸಾರ್ಥಕತೆ ಮೆರೆದ ಕಾರುಣ್ಯಾಶ್ರಮದ ಪದ್ದಮ್ಮ....

❏ ನೈಜ್ಯ ದೆಸೆ ನ್ಯೂಸ್




**ಸಿಂಧನೂರು: ಡಿ 21 ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಣೆ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಸುಮಾರು ಒಂದುವರೆ ವರ್ಷಗಳ ಕಾಲ ಆಶ್ರಯ ಪಡೆದಿದ್ದ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಹಂಪಾಪಟ್ಟಣ ನಿವಾಸಿಯಾದ ಪದ್ದಮ್ಮ ಗಂ. ವಟಮನ ರಾಮಪ್ಪ ವಯಸ್ಸು-64 ಇವರಿಗೆ ಯಾರು ಇಲ್ಲದ್ದನ್ನು ಗಮನಿಸಿ ಹಗರಿಬೊಮ್ಮನಹಳ್ಳಿ ತಹಸಿಲ್ದಾರರಾದ ಕವಿತಾ ಹಾಗೂ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಮತ್ತು ಪದಾಧಿಕಾರಿಗಳು ಆಶ್ರಮದಲ್ಲಿ ಆಶ್ರಯ ಕೊಡಿಸಿದ್ದರು.**

ಇವರು ಮಲಗಿದ್ದಲ್ಲಿ ಎಲಾ ಚಟುವಟಿಕೆಗಳನ್ನು ಮಾಡಿಕೊಳ್ಳುತ್ತಾ ಕಾರುಣ್ಯ ಕುಟುಂಬದ ಕೂಸಾಗಿ ಆಶ್ರಮದಲ್ಲಿ ಬದುಕು ಕಂಡುಕೊಂಡಿದ್ದಳು. ಇವರ ಅನಾರೋಗ್ಯದ ಹಿನ್ನೆಲೆಯಲ್ಲಿ ಚಿಕಿತ್ಸೆ ಕೊಡಿಸಿದರು ಸಹ ಚಿಕಿತ್ಸೆ ಫಲಕಾರಿಯಾಗದೆ ಇಂದು ನಮ್ಮನ್ನೆಲ್ಲ ಅಗಲಿದ್ದಾಳೆ. ಈ ತಾಯಿಯ ನೆನಪುಗಳು ಮಾತ್ರ ನಮ್ಮ ಜೊತೆ ಉಳಿದಿರುತ್ತವೆ. ಈ ತಾಯಿಯ ಮರಣದ ನಂತರ ನಾವು ಹಗರಿಬೊಮ್ಮನಹಳ್ಳಿ ತಾಲೂಕ ಆಡಳಿತ ಹಾಗೂ ಗ್ರಾಮ ಪಂಚಾಯತ ಆಡಳಿತಕ್ಕೆ ಮಾಹಿತಿ ನೀಡಿದಾಗ. ನಿಮ್ಮ ಸಂಸ್ಥೆಯ ತೀರ್ಮಾನವೇ ಅಂತಿಮ ಎಂದು ಸೂಚಿಸಿದರು.

ಹೀಗಾಗಿ ನಮ್ಮ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳ ಒಪ್ಪಿಗೆಯ ಮೇರೆಗೆ ನಾವು ಅನಾಥರಾಗಿರಬಹುದು ಸಮಾಜ ಅನಾಥ-'ವಾಗಬಾರದು ನಮ್ಮ ಕಣ್ಣುಗಳ ಇನ್ನೊಬ್ಬರ ಬಾಳಿಗೆ ಬೆಳಕಾಗಲಿ ಇವರ ದೇಹ ವೈದ್ಯಕೀಯ ಶಿಕ್ಷಣಕ್ಕೆ ಮೆರುಗು ನೀಡಲಿ ಎನ್ನುವ ಉದ್ದೇಶದಿಂದ ರಾಯಚೂರಿನ ಅಂಗರಕ್ಷಣಾ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ನವೀನ್ ಹಾಗೂ ನೇತ್ರ ವಿಭಾಗದ ಡಾ. ಸಿದ್ದೇಶ್ ಇವರುಗಳಿಗೆ ಮಾಹಿತಿ ನೀಡಿ ರಾಯಚೂ-ರಿನ ರಿಮ್ಸ್ ಮೆಡಿಕಲ್ ಕಾಲೇಜಿಗೆ ನೇತ್ರದಾನ ದೇಹ ದಾನ ಮಾಡಲಾಗಿದೆ ಎಂದು ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸಯ್ಯಸ್ವಾಮಿ ಹಿರೇಮಠ ಅವರು ತಿಳಿಸಿದರು. ಈ ಸಮಯದಲ್ಲಿ ರಿಮ್ಸ್ ಮೆಡಿಕಲ್ ಕಾಲೇಜಿನ ಸಿಬ್ಬಂದಿಗಳಾದ ಜಬಿ ಉಲ್ಲಾ ಹಾಗೂ ಶೇಖ್ ಅಬ್ದುಲ್ ಮತೀನ್ ಇವರುಗಳ ಮೂಲಕ ದೇಹವನ್ನು ಒಪ್ಪಿಸಲಾಯಿತು ಸಮಯದಲ್ಲಿ ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ ಹಾಗೂ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮ-ರಿಯಪ್ಪ.ಜ್ಯೋತಿ. ಅನೇಕರು ಉಪಸ್ಥಿತರಿದ್ದರು.

## ಯಾವುದೇ ಮಗು ಲಸಿಕೆಯಿಂದ ತಪ್ಪಿಸಿಕೊಳ್ಳದಂತೆ ನೋಡಿ ಕೊಳ್ಳಿ :ಬಾಲಪ್ಪ ನಾಯಕ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ



❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು ಡಿಸೆಂಬರ್ 22: ಸಮೀಪದ ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ **ಅರಗಿನ ಮರ, ಜಂಗಮರ ಹಟ್ಟಿ, ಸುಲ್ತಾನಪುರ ತುರುಕಟ್ಟಿ ,ಮಾರುತಿ ನಗರ, ಜವಳಗೇರಾದ ವಿವಿಧ ಬಡಾವಣೆಗಳಲ್ಲಿ ಮನೆ ಮನೆಗೆ ಭೇಟಿ ನೀಡಿ ಯಾವುದೇ ಮಗು ಲಸಿಕೆಯಿಂದ ತಪ್ಪಿಸಿಕೊಳ್ಳದಂತೆ ಪೋಲಿಯೋ ತಂಡಗಳನ್ನಾಗಿ ಮಾಡಿ ಮನೆ ಭೇಟಿ ನೀಡಿ ಲಸಿಕೆಯನ್ನು ಹಾಕಲಾಗುತ್ತದೆ.**

ದಿನಾಂಕ 21 ಡಿಸೆಂಬರ್ ಪೋಲಿಯೋ ಭಾನುವಾರದಂದು ನಿಮ್ಮ ಅನಾರೋಗ್ಯದ ಕಾರಣಗಳಿಂದ ಮಗುವಿಗೆ ಲಸಿಕೆಯನ್ನು ಕೊಡಿಸದಿದ್ದ ಸಂದರ್ಭದಲ್ಲಿ ದಿನಾಂಕ 22 ರಿಂದ 24 ರವರಿಗೆ ಮನೆ ಮನೆ ಭೇಟಿ ನೀಡುವ ಅಂಗನವಾಡಿ ಕಾರ್ಯಕರ್ತರು ಆಶಾ ಕಾರ್ಯಕರ್ತರು ಆರೋಗ್ಯ ಸಿಬ್ಬಂದಿಯವರ ಹತ್ತಿರ ಭೇಟಿಯಾಗಿ ಪೋಲಿಯೋ ಲಸಿಕೆಯನ್ನು ಹಾಕಿಸಬೇಕೆಂದು ಮಾಹಿತಿ ಶಿಕ್ಷಣ ನೀಡಲಾಗುತ್ತದೆ ಎಂದು ಬಾಲಪ್ಪ ನಾಯಕ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ತಿಳಿಸಿದರು. ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತರಾದ ಮಹೇಶ್ವರಿ, ಶರಣಮ್ಮ, ಶಿವಮ್ಮ ಈರಮ್ಮ ಅಂಗನವಾಡಿ ಕಾರ್ಯಕರ್ತರಾದ ಬಸವಂತಮ್ಮ , ಈರಮ್ಮ ಮತ್ತು ಮತ್ತು ಮಕ್ಕಳ ತಾಯಂದಿರು ಉಪಸ್ಥಿತರಿದ್ದರು

## ಕೃಷ್ಣಾ ಬ್ರಿಡ್ಜ್ ಬಾಕಿ ಕಾಮಗಾರಿ ಶೀಘ್ರವೇ ಪೂರ್ಣಗೊಳಿಸಲು ಡಾ.ಬಾಬುರಾವ್ ಮನವಿ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳನ್ನು ಸಂಪರ್ಕಿಸುವ ಬಹುದೊಡ್ಡ ಸೇತುವೆಯ ಬಾಕಿ ಇರುವ ಕಾಮಗಾ-ರಿಯನ್ನು ಶೀಘ್ರವೇ ಪೂರ್ಣಗೊಳಿಸಲು ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಕ್ರಮ ವಹಿಸಬೇಕೆಂದು ಎಪಿಎಂಸಿ ಮಾಜಿ ಉಪಾಧ್ಯಕ್ಷ ಹಾಗೂ ಸಮಾಜ ಸೇವಕ ಡಾ.ಬಾಬುರಾವ್ ಮನವಿ ಮಾಡಿಕೊಂಡಿದ್ದಾರೆ.**





ಟೆಂಡರ್ ಪ್ರಕಾರ ಈ ಕಾಮಗಾರಿ ನವೆಂಬರ್ 6, 2021 ರಂದು ಪ್ರಾರಂಭವಾಗಿ ಇದೇವರ್ಷ ಅಕ್ಟೋಬರದೊಳಗೆ ಪೂರ್ಣಗೊಳಿಸಬೇಕಾಗಿತ್ತು. ಕಾಮಗಾರಿ ಪ್ರಗತಿ ಹಂತದಲ್ಲಿದ್ದು ವೇಗವನ್ನು ಪಡೆದುಕೊಳ್ಳಬೇಕಾಗಿದೆ. ಏಕೆಂದರೆ ಹಳೆಯ ಬ್ರಿಡ್ಜ್ ಪುರಾತನ ಕಾಲದ್ದಾಗಿರುವುದರಿಂದ ಅದು ಶಿಥಿಲಾವಸ್ಥೆಗೆ ತಲುಪಿದಂತೆ ಕಾಣುತ್ತಿದೆ. ಯಾವ ಗಳಿಗೆಯಲ್ಲಿ ಏನಾಗುತ್ತದೆ ಎಂಬ ಆತಂಕ ಇರುವುದರಿಂದ ಹೊಸ ಬ್ರಿಡ್ಜನ್ನು ಆದಷ್ಟು ಬೇಗನೆ ಪೂರ್ಣಗೊಳಿಸಬೇಕಾಗಿದೆ. ಎರಡು ರಾಜ್ಯಗಳಿಂದ ಜನ ಹೆಚ್ಚಿನ ಪ್ರಮಾಣದಲ್ಲಿ ಪ್ರಯಾಣಕ್ಕೆ ಇದೇ ಬ್ರಿಡ್ಜ್ ನ್ನು ಉಪಯೋಗಿಸುತ್ತಿರುವುದ-ರಿಂದ ಬ್ರಿಡ್ಜ್ ನ್ನು ಪೂರ್ಣಗೊಳಿಸಿದರೆ ಹೆಚ್ಚಿನ ಅನುಕೂಲವಾಗುತ್ತದೆ ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಹಾಗೂ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಈ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಲು ಸೂಚಿಸಬೇಕೆಂದು ಪತ್ರಿಕಾ ಹೇಳಿಕೆಯಲ್ಲಿ ಕೋರಿದ್ದಾರೆ.

## ಪಲ್ಸ್ ಪೋಲಿಯೋ ಕಾರ್ಯಕ್ರಮ ಮನೆಮನೆ ಭೇಟಿ. ಜಿಲ್ಲಾ ಮಟ್ಟದ ಮೇಲ್ವಿಚಾರಕರ ಭೇಟಿ

❏ ನೈಜ್ಯ ದೆಸೆ ನ್ಯೂಸ್

**ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಆಶಾ ಕಾರ್ಯಕರ್ತರು ಹಾಗೂ ಪಲ್ಸ್ ಪೋಲಿಯೋ, ವ್ಯಾಕ್ಸಿನೇಟರ್ ಗಳು ಇಂದು ಮನೆ ಮನೆಗೆ ಭೇಟಿ ನೀಡಿ ಪೋಲಿಯು ಲಸಿಕೆ ಹಾಕಿಸದ ಮಕ್ಕಳಿಗೆ ಮನೆ ಬಾಗಿಲಿಗೆ ತೆರೆ ತೆರಳಿ ಪೋಲಿಯೋ ಲಸಿಕೆ ಹಾಕಿದರು ಜಿಲ್ಲಾ ಮಟ್ಟದ ಮೇಲ್ವಿಚಾರಕರಾದ ಲೋಕೇಶ್ ಅವರು ಪಲ್ಸ್ ಪೋಲಿಯೋ ತಂಡಗಳನ್ನು ಭೇಟಿ.**



ಮಾಡಿ ಪರಿಶೀಲನೆ ನಡೆಸಿದರು ಪಲ್ಸ್ ಪೋಲಿಯೋ ಕಾರ್ಯಕ್ರಮದ ಮೇಲ್ವಿಚಾರಕರಾದ ಆರೋಗ್ಯ ಸುರಕ್ಷಣಾಧಿಕಾರಿಗಳು ಆದ ಶ್ರೀ ಹನುಮಂತ ಮನೆ ಭೇಟಿ ನೀಡಿ ಪರಿಶೀಲನೆ ನಡೆಸುವುದರ ಮುಖಾಂತರ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿದರೆ ಬಗ್ಗೆ ಖಚಿತಪಡಿಸಿಕೊಂಡರು ಮನೆ ಭೇಟಿ ಕಾರ್ಯಕ್ರಮವನ್ನು ನಿರಂತರ ಇನ್ನೂ ಮೂರು ದಿನಗಳು ನಡೆಯಲಿದ್ದು ಎಲ್ಲಾ ಮಕ್ಕಳಿಗೂ ಪಲ್ಸ್ ಪೋಲಿಯೋ ಹಾಕಲಾಗುವುದು ಎಂದು ನೈಜ ದೆಸೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

## ಬೂತಲದಿನ್ನಿ ಗ್ರಾಮದಲ್ಲಿ ಅಂಗವಿಕಲರ ಹಾಗೂ ಮಕ್ಕಳ ಗ್ರಾಮಸಭೆ




❏ ನೈಜ್ಯ ದೆಸೆ ನ್ಯೂಸ್

ತಾಲೂಕಿನ ಭೂತಲದಿನ್ನಿ ಗ್ರಾಮ ಪಂಚಾಯತಿಯ ಆವರಣದಲ್ಲಿ ಅಂಗವಿಕಲರ **ಹಾಗೂ ಮಕ್ಕಳ ಗ್ರಾಮಸಭೆ ನಡೆಸಲಾಯಿತು. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸವಿತಾ ಅವರು ಮಾತನಾಡಿ, ಸರ್ಕಾರದಿಂದ ವೀಕಲಚೇತನರಿಗೆ ದೊರೆಯುವ ವಿಶೇಷ ಯೋಜನೆ ಬಗ್ಗೆ ಪುನರ್ವಸತಿ ಕಾರ್ಯಕರ್ತರು ಮಾಹಿತಿಯನ್ನು ನೀಡುವ ಕೆಲಸ ಮಾಡಲಾಗುತ್ತಿದೆ.**

ಅವರೆಲ್ಲರ ಬಗ್ಗೆ ವಿಶೇಷ ಕಾಳ-ಜಿಯನ್ನು ಗ್ರಾಮ ಪಂಚಾಯಿತಿ ಹೊಂದಿದೆ. ಮೀಸಲು ಅನುದಾನವನ್ನು ಅವರಿಗಾಗಿಯೇ ಅವರ ಬೇಡಿಕೆಗಳಿಗೆ ಸ್ಪಂದಿಸಲಾಗುತ್ತದೆ ಎಂದರು. ಮಕ್ಕಳು ತಮ್ಮ ಹಕ್ಕುಗಳನ್ನು ಅನುಭವಿಸಲು ಹಾಗೂ ಆ ಹಕ್ಕುಗಳಿಗೆ ಚ್ಯುತಿ ಬಂದಾಗ ರಕ್ಷಣೆ ಮಾಡಿಕೊಳ್ಳಲು ಹಾಗೂ ತಮ್ಮ ಬೇಕುಬೇಡಗಳನ್ನು ಸಮಾಜದ ಮುಂದೆ ನಿರ್ಭಯವಾಗಿ ಹೇಳಿಕೊಳ್ಳಲು ಇರುವ ಒಂದೇ ಒಂದು ವೇದಿಕೆ ಎಂದರೆ ಮಕ್ಕಳ ವಿಶೇಷ ಗ್ರಾಮಸಭೆ. ನಾಗರಿಕರು ತಮ್ಮ ಬೇಡಿಕೆಗಳನ್ನು ಅಹವಾಲುಗಳನ್ನು ಗ್ರಾಮಸಭೆಯ ಮೂಲಕ ಸಲ್ಲಿಸುವಂತೆ ಮಕ್ಕಳೂ ಸಹ ತಮ್ಮ ಬೇಡಿಕೆಗಳನ್ನು ಕುಂದು-ಕೊರತೆಗಳನ್ನು ಮಕ್ಕಳ ಗ್ರಾಮಸಭೆಯ ಮೂಲಕ ಪರಿಹರಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ: ಗ್ರಾಮ ಪಂಚಾಯತಿಯ ಸದಸ್ಯ ಕಂತೆಪ್ಪ, ಲೆಕ್ಕಾಧಿಕಾರಿ ಜಲಾಲೆಪ್ಪ, ಶಿಕ್ಷಕರಾದ ಸತ್ಯಪ್ಪ, ಯಮನಪ್ಪ, ಗ್ರಾಮೀಣ ಪುನರಾವಸತಿ ಕಾರ್ಯಕರ್ತ ಮಾಯಪ್ಪ ಮಲ್ಲಾಪುರ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರು ಮತ್ತು ಅನೇಕರು ಶಾಲೆಯ ಮಕ್ಕಳು ವಿಕಲಚೇತನರು ಭಾಗವಹಿಸಿದ್ದರು. ವಿಶೇಷ ಚೇತನರ ಆದ-

## ಗ್ರಾಮ ಪಂಚಾಯತ್ ಆರ್.ಎಚ್. ನಂಬರ್ 1 ವ್ಯಾಪ್ತಿಯಲ್ಲಿ ಮಕ್ಕಳ ಗ್ರಾಮ ಸಭೆ ಯಶಸ್ವಿ

❏ ನೈಜ್ಯ ದೆಸೆ ನ್ಯೂಸ್

**ಗ್ರಾಮ ಪಂಚಾಯತ್ ಆರ್.ಎಚ್. ನಂಬರ್1 ವ್ಯಾಪ್ತಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಲ್ಲಿ ನಾಯಕತ್ವ ಗುಣಗಳು, ಹಕ್ಕುಗಳ ಅರಿವು ಹಾಗೂ ನಾಗರಿಕ ಜವಾಬ್ದಾ-ರಿಯನ್ನು ಬೆಳೆಸುವ ಉದ್ದೇಶದಿಂದ ಮಕ್ಕಳ ಗ್ರಾಮ ಸಭೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.**



ಸಭೆಯ ಅಧ್ಯಕ್ಷತೆಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀ ರೆಹಮತ್ ಪಾಷಾ ಅವರು ವಹಿಸಿದ್ದರು. ಅವರು ಮಾತನಾಡಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸಲಾಗುವುದು ಎಂದು ಭರವಸೆ ನೀಡಿದರು. ಇದೇ ಸಂದರ್ಭದಲ್ಲಿ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀ ಈರಣ್ಣ ಕಮ್ಮಾರ್, ಮಕ್ಕಳ ಗ್ರಾಮ ಸಭೆಯ ವಿಶೇಷ ಆಹ್ವಾನಿತರಾಗಿ ಮಕ್ಕಳ ಪ್ರತಿನಿಧಿಯಾಗಿ ಕುಮಾರಿ ಅಕ್ಷತಾ ವೇದಿಕೆಯನ್ನು ಅಲಂಕರಿಸಿದ್ದರು. ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು ಉಮೇಶ್ ಸಾಹೇಬ್ ಮಾತನಾಡಿ ಅವರು ಮಾತನಾಡಿ, ಮಕ್ಕಳಿಗೆ ಶಿಕ್ಷಣದ ಮಹತ್ವ, ಶಿಸ್ತು, ಸ್ವಚ್ಛತೆ, ಆರೋಗ್ಯ, ನಿಯಮಿತ ಹಾಜರಾತಿ ಹಾಗೂ ಮೌಲ್ಯಾಧಾರಿತ ಜೀವನದ ಅಗತ್ಯತೆಯ ಕುರಿತು ವಿವರವಾಗಿ ತಿಳಿಸಿದರು.

ಮಕ್ಕಳ ಅಭಿಪ್ರಾಯಗಳಿಗೆ ಗೌರವ ನೀಡುವುದು ಹಾಗೂ ಶಾಲೆ?ಸಮುದಾಯ?ಗ್ರಾಮ ಪಂಚಾಯತ್ ನಡುವಿನ ಸಹಕಾರ ಅತ್ಯಂತ ಅಗತ್ಯವೆಂದು ಅವರು ತಿಳಿಸಿದರು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಶಾಲೆ ಸದಾ ಬದ್ಧವಾಗಿದ್ದು, ಮಕ್ಕಳ ಗ್ರಾಮ ಸಭೆಗಳು ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ನಾಯಕತ್ವ ಗುಣಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಅವರು ಮಾತನಾಡಿ, ಮಕ್ಕಳ ಕಲ್ಯಾಣ ಹಾಗೂ ಶಿಕ್ಷಣ ಸಂಬಂಧಿತ ಸಮಸ್ಯೆಗಳಿಗೆ ಗ್ರಾಮ ಪಂಚಾಯತ್ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ತಿಳಿಸಿದರು. ಸರ್ಕಾರದ ಮಕ್ಕಳ ಕಲ್ಯಾಣ ಯೋಜನೆಗಳು, ಶಾಲಾ ಸೌಲಭ್ಯಗಳು ಹಾಗೂ ಸಮುದಾಯದ ಪಾತ್ರದ ಕುರಿತು ಮಾಹಿತಿ ನೀಡಿದರು.

ಸಭೆಯಲ್ಲಿ ಮಕ್ಕಳಿಂದ ಶಿಕ್ಷಣ, ಶಾಲಾ ಮೂಲಸೌಕರ್ಯ, ಸ್ವಚ್ಛತೆ, ಆಟದ ಮೈದಾನ, ಆರೋಗ್ಯ ಹಾಗೂ ಸುರಕ್ಷತೆ ಕುರಿತು ಅನೇಕ ಉಪಯುಕ್ತ ಸಲಹೆಗಳು ಲಭಿಸಿವೆ. ಈ ಸಲಹೆಗಳನ್ನು ಮುಂದಿನ ಗ್ರಾಮ ಪಂಚಾಯತ್ ಸಭೆಯಲ್ಲಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜಂಟಿಯಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಎಸ್‌ಡಿಎಂಸಿ ನಾಮ ನಿರ್ದೇಶಕ ಸದಸ್ಯರಾದ ಲಾಜರ್ ಸಿರಿಲ್ ಕಾರ್ಯಕ್ರಮದ ಕುರಿತು ಮಾತನಾಡಿ ಮಕ್ಕಳ ಸಕ್ರಿಯ ಪಾಲ್ಗೊಳ್ಳುವಿಕೆ ಮಕ್ಕಳ ಗ್ರಾಮ ಸಭೆ ಮಕ್ಕಳಲ್ಲಿ ಜವಾಬ್ದಾರಿ, ಆತ್ಮವಿಶ್ವಾಸ ಹಾಗೂ ನಾಗರಿಕ ಅರಿವನ್ನು ಬೆಳೆಸುವ ಮಹತ್ವದ ವೇದಿಕೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಶಾಲಾ ಪ್ರಭಾರಿ ಮುಖ್ಯ ಗುರುಗಳಾದ ಶ್ರೀ ಉಮೇದ್ ಸಾಹೇಬ್ , ಶಾಲಾ ಶಿಕ್ಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಮತ್ತು ಸದಸ್ಯರು, ಅಂಗನವಾಡಿ ಕಾರ್ಯಕರ್ತರು, ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ವಿಶ್ವನಾಥ್, ನಾಮನಿರ್ದೇಶಿತ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರಾದ ಶ್ರೀ ಲಾಜರ್ ಸಿರಿಲ್ ಅವರುಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕರಾದ ಶ್ರೀ ಅರುಣ್ ಕುಮಾರ್ ಎಂ ಹಾಗೂ ಶ್ರೀ ಉಮೇದ್ ಸಾಹೇಬ್ ಅವರು ಸಮರ್ಥವಾಗಿ ನಿರ್ವಹಿಸಿದರು...

## ನೇಮಕಾತಿ ಪ್ರಕಟಣೆ

GAMCB ನೇಮಕಾತಿ 2025 08 ಪ್ರಾಧ್ಯಾಪಕ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಉಂಬಅಃ ನೇಮಕಾತಿ 2025: 8 ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಬೆಂಗಳೂರು ಕರ್ನಾಟಕ ಸರ್ಕಾರದ ಆಯುಷ್ ಇಲಾಖೆಯ ಸರ್ಕಾರಿ ಆಯುರ್ವೇದ ವೈದ್ಯಕೀಯ । ಮಹಾವಿದ್ಯಾಲಯ, ಬೆಂಗಳೂರು ಇಲ್ಲಿಗೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಐ.ಎಂ.ಸಿ.ಸಿ. ಕಾಯ್ದೆ 1970 ರ । ಶೆಡ್ಯೂಲ್ ರಲ್ಲಿ ಸೇರ್ಪಡೆಯಾದ ಸಂಬಂಧಿತ ಪದ್ಧತಿ ಹಾಗೂ ವಿಷಯದಲ್ಲಿ ಸ್ನಾತಕೋತ್ತರ ಪದವಿ ವಿದ್ಯಾರ್ಹತೆಯೊಂದಿಗೆ (ಎಂ.ಡಿ/ಎಂ.ಎಸ್) ಬಿ.ಎ.ಎಂ.ಎಸ್. ಪದವಿಯನ್ನು ಹೊಂದಿರುವ ಅಭ್ಯರ್ಥಿಗಳಿಂದ ಗುತ್ತಿಗೆ ಆಧಾರದ ಮೇಲೆ ಸಮಾಲೋಚಕರ ಶಿಕ್ಷಕರ ನೇಮಕಾತಿಗಾಗಿ (ಕನ್ಸಲೆಂಟ್) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿದಾರರು ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರು ಹುದ್ದೆಗೆ ಉನ್ನತ ಮಟ್ಟದ ಬೋಧನೆ ನೀಡಿರುವ ಅನುಭವ ಹೊಂದಿರಬೇಕು. ಈ ನೇಮಕಾತಿಯು ಅರ್ಹತೆ ಸಹಿತ ಮೀಸಲಾತಿ ರೋಸ್ಟರ್, ಮೆರಿಟ್ ಆಧಾರದಲ್ಲಿದ್ದು, 11 ತಿಂಗಳ ಅವಧಿಯ ತಾತ್ಕಾಲಿಕ ನೇಮಕಾತಿಯಾಗಿರುತ್ತದೆ ಅಥವಾ ಕೆ.ಪಿ.ಎಸ್.ಸಿ / ಸರ್ಕಾರದಿಂದ ಅನುಮತಿ ಪಡೆದ ಬೇರೆ ಯಾವುದೇ ಏಜೆನ್ಸಿಗಳ ಮೂಲಕ ಹುದ್ದೆಗಳು ಭರ್ತಿಯಾಗುವವರೆಗೆ ಮಾತ್ರ ಅನ್ವಯಿಸುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ಈ ಕೆಳಗೆ ಸೂಚಿಸಲಾದ ಮಾಸಿಕ ಸಂಚಿತ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ. 1. ಸಹಾಯಕ ಪ್ರಾಧ್ಯಾಪಕರು – ರೂ. 45,000/– (ಪ್ರತಿ ಮಾಹೆಯಾನ) 2. ಸಹ ಪ್ರಾಧ್ಯಾಪಕರು 3. ಪ್ರಾಧ್ಯಾಪಕರು – ರೂ. 45,000/– (ಪ್ರತಿ ಮಾಹೆಯಾನ) – ರೂ. 45,000/– (ಪ್ರತಿ ಮಾಹೆಯಾನ) ಹೆಚ್ಚಿನ ವಿವರಗಳು : ಹುದ್ದೆಯ ಸಂಖ್ಯೆ, ವಿಷಯ, ಅರ್ಹತೆ, ಮೀಸಲಾತಿ ಹಾಗೂ ಅರ್ಜಿ ನಮೂನೆ ಇವೆಲ್ಲವೂ ವೆಬ್ ಸೈಟ್ : https://gamcb.com ನಲ್ಲಿ ಲಭ್ಯವಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–12–2025 ರಂದು ಸಂಜೆ 5.00 ಗಂಟೆಯವರೆಗೆ ಮಾತ್ರ. (ಅಂಚೆ ಮೂಲಕ ಅರ್ಜಿ ಸಲ್ಲಿಸುವವರು ಅಂತಿಮ ದಿನಾಂಕದೊಳಗಾಗಿ ಈ ಕಛೇರಿಗೆ ಅರ್ಜಿ ತಲುಪುವಂತೆ ಸಲ್ಲಿಸುವುದು) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–12–2025

# ಅತಿಥಿ ಉಪನ್ಯಾಸಕರ ಖಾಯಂ, ಬಾಕಿ ವೇತನಕ್ಕಾಗಿ ಜ.5 ರಂದು ಮುಖ್ಯಮಂತ್ರಿ ಮನೆಮುಂದೆ ಹೋರಾಟ

❑ ನೈಜ್ಯ ದೇಸೆ ನ್ಯೂಸ್

**ಕಳೆದ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಖಾಯಂ ಮಾಡಬೇಕು. ಅಲ್ಲಿಯವರೆಗೆ ಸೇವೆಯಲ್ಲಿ ಮುಂದುವರಿಸಬೇಕು. ಇಲ್ಲಿಯವರೆಗೂ ಸರ್ಕಾರದಲ್ಲಿ ಉಳಿದಿರುವ ಬಾಕಿ ವೇತನ ನೀಡಬೇಕೆಂಬ ಹಲವಾರು ಬೇಡಿಕೆಗಳಿಗಾಗಿ ಜನವರಿ 5 ರಂದು ಮುಖ್ಯಮಂತ್ರಿ ಮನೆಮುಂದೆ ಹೋರಾಟ ನಡೆಸಲಾಗುವುದು ಎಂದು ಉಪಾಧ್ಯಕ್ಷ ಸಿದ್ದಪ್ಪ ಬಾವಿಮನೆ ತಿಳಿಸಿದರು.**

ಪತ್ರಿಕಾ ಭವನದಲ್ಲಿ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಸೋಮವಾರ ಸುದ್ದಿಗೋಷ್ಟಿ ನಡೆಸಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ 2023 ಜನವರಿ 6 ರಂದು ನಮ್ಮ ಗೌರವ ಧನವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿ ಅನುಕೂಲ ಮಾಡಿಕೊಟ್ಟರು. ಕಳೆದ ಹಲವಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರು ಅತ್ಯಂತ ಕಡಿಮೆ ಗೌರವಧನಕ್ಕೆ ದುಡಿಯುತ್ತಿದ್ದು, 60ನೇ ವಯಸ್ಸಿನವರೆಗೂ ಸೇವೆ ಮುಂದುವರಿಸಲು ಸೇವಾ ಭದ್ರತೆ ನೀಡುವುದಾಗಿ ಕಾಂಗ್ರೆಸ್ ಸರ್ಕಾರ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಪ್ರಕಟಸಿದೆ. 2024 ಅಕ್ಟೋಬರ್ ತಿಂಗಳಿಂದ ಇಲ್ಲಿತನಕ ಸರ್ಕಾರ 20 ಬಾರಿ ನೇಮಕಾತಿ ಪ್ರಕಟಣೆ ಹೊರಡಿಸುವ ಮೂಲಕ ನಾವು ಸೇವೆಯಲ್ಲಿ ಆತಂಕ, ಒತ್ತಡದಲ್ಲಿ ಇರುವಂತೆ ಮಾಡಿದೆ. 40 ಜನ ಅತಿಥಿ ಉಪನ್ಯಾಸಕರು ಜೀವ ಕಳೆದುಕೊಂಡಿದ್ದಾರೆ.

ಬೆಳಗಾವಿ ಚಳಿಗಾಲದ ಅಧಿವೇಶನದ ಸದನದ ಮುಂದೆ ಪ್ರತಿಭಟನೆ ನಿರತರಾದ ನಮಗೆ ಆಯುಕ್ತೆ ಮಂಜುಶ್ರೀ, ಉನ್ನತ ಶಿಕ್ಷಣ ಸಚಿವ ಎಂ.ಸುಧಾಕರ್, ಕಾನೂನು ಸಚಿವ ಎಚ್.ಕೆ.ಪಾಟೀಲ್, ಅವರೊಂದಿಗೆ ಈಗಾಗಲೇ ಸಭೆ ನಡೆಸಿ, ಇಲ್ಲಿತನಕ ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆ ಮಾಡದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು, ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಎಲ್ಲಾ ಅತಿಥಿ ಉಪನ್ಯಾಸಕರಿಗೆ ಅನುಕೂಲವಾಗುವಂತೆ ಯೋಜನೆ ರೂಪಿಸಲಾಗಿದೆ ಘೋಷಣೆ ಮಾತ್ರ ಬಾಕಿಯಿದೆ ಎಂದು ಹೇಳಿ ನಮ್ಮನ್ನು ಸಮಾಧಾನ ಮಾಡಿದ್ದರು.

ನಮ್ಮ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ವಿಚಾರಿಸಿದಾಗ ಸಚಿವ ಸಂಪುಟದಲ್ಲಿ ಈಗಾಗಲೇ ನಿರ್ಧಾರವಾಗಿದೆ. ಇನ್ನೊಂದು ವಾರದಲ್ಲಿ ತಮ್ಮನ್ನು ಕೆಲಸಕ್ಕೆ ಮರುನೇಮಕ ಮಾಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ. ಇನ್ನೊಂದು ಕಡೆಗೆ ಆಯುಕ್ತರ ಎರಡನೇ ಸುತ್ತಿನ ಕೌನ್ಸಿಲಿಂಗ್ ಪ್ರಕ್ರಿಯೆ ಇಂದಿನಿಂದ ಪ್ರಾಂಭಿಸಲು ಆದ–'ೀಶಿಸಿದ್ದಾರೆ. ಇಲ್ಲಿತನಕ ಸೇವೆ ಸಲ್ಲಿಸಿರುವ ಸುಮಾರು 6 ಸಾವಿರಕ್ಕೂ ಹೆಚ್ಚು ಉಪನ್ಯಾಸಕರನ್ನು ಬೀದಿಗೆ ತಳ್ಳಿದಂತಾಗಿದೆ. ಕೂಡಲೇ ಮುಖ್ಯಮಂತ್ರಿಗಳ ಭರವಸೆಯಂತೆ ನಮ್ಮನ್ನು ರಕ್ಷಣೆ ಮಾಡಬೇಕೆಂದು ಮನವಿ ಮಾಡಿಕೊಂಡರು. ಒಂದುವೇಳೆ ರಕ್ಷಣೆ ಮಾಡದೇ ಹೋದರೆ, 2026 ರ ಜನವರಿ 5 ರಂದು ಮುಖ್ಯಮಂತ್ರಿ ಮನೆಮುಂದೆ ಹೋರಾಟಕ್ಕೆ ರಾಜ್ಯದಾದ್ಯಂತ ಕರೆ ಕೊಡುತ್ತಿದ್ದೇವೆ ಎಂದರು. ಈ ವೇಳೆ: ತಾಲೂಕು ಕಾರ್ಯದರ್ಶಿ ಅಮೀರ್ ಅಮದ್, ಶಂಕರ್ ವಾಲೇಕರ್, ಮರಿಯಪ್ಪ, ಹನುಮಂತ, ಇದ್ದರು.




## ಬೈಕ್–ಟ್ರ್ಯಾಕ್ಟರ್ ಭೀಕರ ಅಪಘಾತ: ದಂಪತಿ ದುರ್ಮರಣ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಬೈಕ್ ಗೆ ಹಿಂಬದಿಯಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ನಲ್ಲಿದ್ದ ದಂಪತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ರಾಯಚೂರು ಜಿಲ್ಲೆಯ ದೇವದುರ್ಗ ಬಳಿ ನರಗುಂದ ರಸ್ತೆಯಲ್ಲಿ ನಡೆದಿದೆ.**





ಹಸೀನಾ ಬೇಗಂ (28) ಹಾಗೂ ರಂಜಾನ್ ಸಾಬ್ (30) ಮೃತ ದಂಪತಿ. ಅರಶಿಣಗಿ ಗ್ರಾಮದಿಂದ ದೇವದುರ್ಗಕ್ಕೆ ಬೈಕ್ ನಲ್ಲಿ ಹೋಗುತ್ತಿದ್ದ ವೇಳೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಅಪಘಾತದಲ್ಲಿ ಹಸೀನಾ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಪತಿಯನ್ನು ಆಸ್ಪತ್ರೆಗೆ ಸಾಗಿಸುತ್ತುದ್ದ ವೇಳೆ ಮಾರ್ಗ ಮಧ್ಯೆ ಪತಿ ರಂಜಾನ್ ಕೂಡ ಕೊನೆಯುಸಿರೆಳೆದಿದ್ದಾರೆ. ದೇವದುರ್ಗ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಶಿಕ್ಷಕ ಹಿರೇಹೊಳಿಗೆ ರಾಜ್ಯ ಸೇವಾರತ್ನ ಪ್ರಶಸ್ತಿ ಪ್ರದಾನ



❑ ನೈಜ್ಯ ದೇಸೆ ನ್ಯೂಸ್

**ತಾಳಿಕೋಟಿ: ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ (ರಿ) ಕರ್ನಾಟಕ ಮತ್ತು ಯುಗದರ್ಶಿನಿ ಮಹಿಳಾ ಪೌಂಡೇಷನ್,ವಿಜಯಪುರ ಇವರ ಸಂಂ–ಯುಕ್ತಾಶ್ರಯದಲ್ಲಿ ವಿಜಯಪುರ ಕವಿ––ಕಾವ್ಯ ಸಂಭ್ರಮ –– 2025 ರ ಕಾರ್ಯಕ್ರಮದಲ್ಲಿ ಶನಿವಾರ ಪಟ್ಟಣದ ಶ್ರೀ ಸಂಗಮೇಶ್ವರ ಪ್ರೌಢಶಾಲೆಯ ಹಿಂದಿ ವಿಷಯ ಶಿಕ್ಷಕ ಬಿ.ಆಯ್.ಹಿರೇಹೊಳಿ ಇವರಿಗೆ ಅವರು ಶೈಕ್ಷಣಿಕ ಕ್ಷೇತ್ರದಲ್ಲಿ ಸಲ್ಲಿಸಿರುವ ಅನನ್ಯ ಸೇವೆ ಮತ್ತು ಸಾಧನೆಯನ್ನು ಗುರುತಿಸಿ ರಾಜ್ಯ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.**

# ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ (ರಿ) ರಾಯಚೂರು ಮಾನ್ವಿ ತಾಲೂಕು ಅಧ್ಯಕ್ಷರಾಗಿ ದೇವೇಂದ್ರ ನಾಯಕ ಆಯ್ಕೆ



❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ (ರಿ) ರಾಯಚೂರು ಜಿಲ್ಲಾಧ್ಯಕ್ಷರಾದ ಬಿ. ರಾಮಣ್ಣ ನಾಯಕ ಮಾತನಾಡಿ ತಾಲೂಕಿನಲ್ಲಿ ಶೈಕ್ಷಣಿಕ, ಆರ್ಥಿಕ, ಹಾಗೂ ಸಂಘಟನೆಯ ಬಲವರ್ಧನೆಗಾಗಿ ನೂತನವಾಗಿ ಮಾನ್ವಿ ತಾಲೂಕು ಅಧ್ಯಕ್ಷರನ್ನಾಗಿ ದೇವೇಂದ್ರ ನಾಯಕ ರವರನ್ನು ಅಯ್ಕೆ ಮಾಡಿ ಅದೇಶ ಪ್ರಮಾಣ ಪತ್ರವನ್ನು ನೀಡಲಾಗಿದ್ದು ಮುಂದಿನ ದಿನಗಳಲ್ಲಿ ನಮ್ಮ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾವನ್ನು ತಾಲೂಕಿನಲ್ಲಿ ಬಲವರ್ಧನೆ ಗೊಳಿಸಬೇಕು ಎಂದು ತಿಳಿಸಿದರು.**

ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮಾನ್ವಿ ತಾಲೂಕ ಘಟಕಕ್ಕೆ ನೂತನ ತಾ.ಅಧ್ಯಕ್ಷರಾಗಿ ಆಯ್ಕೆಯಾದ ದೇವೇಂದ್ರ ನಾಯಕರವರಿಗೆ ಅಭಿಮಾನಿ ಬಳಗ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು ನಾಯ್ಡು ನಾಯಕ, ಹನುಮೇಶ್ ನಾಯಕ,ಕೊಂಡಯ್ಯ ನಾಯಕ, ಯಲ್ಲಯ್ಯ ನಾಯಕ,ದೇವರಾಜ್ ನಾಯಕ,ರಮೇಶ್ ನಾಯಕ, ಹನುಮೇಶ್ ನಾಯಕ,ಉಪೇಂದ್ರ ನಾಯಕ,ತಾಯಣ್ಣ ನಾಯಕ, ನರಸಿಂಹ ನಾಯಕ, ಯಲ್ಲಪ್ಪ ನಾಯಕ,ರಮೇಶ ನಾಯಕ, ನಾಯಕ,ರೇಣುಕಾ ರಾಜಾ ನಾಯಕ,ದೇವರಾಜ್ ನಾಯಕ,ಜಗದೀಶ್ ನಾಯಕ, ವಿರೇಶ್ ನಾಯಕ, ಮಂಜು ನಾಯಕ, ಈರಯ್ಯ ನಾಯಕ, ವೆಂಕಟೇಶ್ ನಾಯಕ,,ವಿಶ್ವನಾಥ ನಾಯಕ, ರಾಜು ನಾಯಕ, ಮಹೇಶ್ ನಾಯಕ, ಶ್ರೀನಿವಾಸ್ ನಾಯಕ, ಚಂದ್ರು ನಾಯಕ,ಪ್ರಜ್ವಲ್ ನಾಯಕ, ಪರಶುರಾಮ್ ನಾಯಕ ವಿರೇಶ್ ನಾಯಕ ಸೇರಿದಂತೆ ಇನ್ನಿತರರು ಇದ್ದರು.

# ಆತ್ಮರಕ್ಷಣೆ ಸ್ಥೈರ್ಯ ಹೆಚ್ಚಿಸಲು ಕರಾಟೆ ಸಹಕಾರಿ; ಬಸವರಾಜ ಹುಡೇದ್

❑ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ರಾಜ್ಯ ಸರ್ಕಾರದ ಯೋಜನೆಯ ಕರಾಟೆ ಹೆಣ್ಣುಮಕ್ಕಳು ಕಲಿಯುವುದ–ರಿಂದ ಆತ್ಮರಕ್ಷಣೆ ಸ್ಥೈರ್ಯ ಹೆಚ್ಚಿಸಲು ಕರಾಟೆ ಸಹಕಾರಿಯಾಗಲಿದೆ ಎಂದು ಸರಕಾರಿ ಪ್ರೌಢಶಾಲೆ ವೀರಾಪುರ ಮುಖ್ಯಗುರು ಬಸವರಾಜ ಹುಡೇದ್ ಹೇಳಿದರು. ಅವರು ತಾಲೂಕಿನ ಸರಕಾರಿ ಪ್ರೌಢಶಾಲೆ ವೀರಾಪುರ ಕರಾಟೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.**

ಸರ್ಕಾರ 2025–26 ಸ್ವಯಂ ರಕ್ಷಣಾ ಕರಾಟೆ ವಿದ್ಯಾರ್ಥಿನಿಯರಿಗೆ ಕರಾಟೆ ತರಬೇತಿಯ ಯೋಜನೆಯನ್ನು ಕೊಟ್ಟ ಸರ್ಕಾರಕ್ಕೆ ಅಭಿನಂದನೆಗಳು ಕರಾಟೆ ಕಲಿಕೆಯನ್ನು ಕಲಿತ ವಿದ್ಯಾರ್ಥಿನಿಯರು ದಿನಾಲೂ ಮನೆಯಲ್ಲಿ ಕರಾಟೆಯನ್ನು ಅಭ್ಯಾಸ ಮಾಡಬೇಕು ಎಂದರು. ಸನ್ಮಾನ :ಕರಾಟೆ ತರಬೇತಿ ಶಿಕ್ಷಕ ಖಾಸಿಂಸಾಬ ಕಲೇಗಾರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕರಾಟೆ ಶಿಕ್ಷಕ ಖಾಸಿಂಸಾಬ ಕಲೇಗಾರ್ ಮಾತನಾಡಿ ಸರ್ಕಾರ ಕೊಟ್ಟ ಅವಧಿಗಳು ನಮಗೆ ಸಾಕಗಲ್ಲ ಇನ್ನೂ ಅವಧಿಗಳನ್ನು ಹೆಚ್ಚಿಸಿ ಗೌರವಧನ ಕೊಡಲು ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಈ ಸಂದರ್ಭದಲ್ಲಿ.ಶಿಕ್ಷಕರಾದ ಮಲ್ಲಿಕಾರ್ಜುನ ಬಳೂಟಿಗಿ, ಅಮರೇಶ ತಳವಾರ, ಬಸವರಾಜ, ಶಿವಕುಮಾರ ಉದ್ಯಾಳ, ಗೀತಾ ಬಿಳಿಗುಡ್ಡ ಸೇರಿದಂತೆ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



# ರಾಯಚೂರಿನಲ್ಲಿ ಸಿರಿಧಾನ್ಯಗಳ ಜಾಗೃತಿ ಜಾಥಾಕ್ಕೆ ಸಚಿವ ಎನ್.ಎಸ್.ಬೋಸರಾಜು ಚಾಲನೆ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು ಡಿಸೆಂಬರ್ 22 (ಕರ್ನಾಟಕ ವಾರ್ತೆ): ಇಲ್ಲಿನ ಕೃಷಿ ಇಲಾಖೆಯಿಂದ ಸಿರಿಧಾನ್ಯ, ಸಾವಯವ ಉತ್ಪನ್ನಗಳ ಕುರಿತು ಗ್ರಾಹಕ–ರಿಗೆ ಜಾಗೃತಿ ಮೂಡಿಸಲು ಸಿರಿಧಾನ್ಯಗಳ ನಡಿಗೆ ರೋಡ್ ಶೋ ಕಾರ್ಯಕ್ರಮಕ್ಕೆ ಡಿಸೆಂಬರ್ 22ರಂದು ನಗರದ ಜಿಲ್ಲಾ ಪಂಚಾಯತ್ ಆವರಣದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಕರ್ನಾಟಕ ವಿಧಾನ ಪರಿಷತ್ತು ಸಭಾ ನಾಯಕರಾದ ಎನ್.ಎಸ್.ಬೋಸರಾಜು ಅವರು ಬಣ್ಣಬಣ್ಣದ ಬಲೂನ್ ಹಾರಿಬಿಡುವ ಮೂಲಕ ಚಾಲನೆ ನೀಡಿದರು.**




ಜಾಗೃತಿ ನಡಿಗೆಯು ಜಿಲ್ಲಾ ಪಂಚಾಯತ್ ಕಚೇರಿ ಆವರಣದಿಂದ ಆರಂಭವಾಗಿ, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಜಂಟಿ ಕೃಷಿ ನಿರ್ದೇಶಕರ ಕಚೇರಿ, ಬಸವೇಶ್ವರ ವೃತ್ತ ಮಾರ್ಗವಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಆವರಣದವರೆಗೆ ಸಾಗಿತು. ಮೆರವಣಿಗೆಯುದ್ದಕ್ಕೂ ಸಿರಿಧಾನ್ಯಗಳ ಮಹತ್ವದ ಕುರಿತು ಘೋಷ ವಾಕ್ಯಗಳನ್ನು ಕೂಗಿ ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಡೊಳ್ಳು ಕುಣಿತ, ಸಿರಿಧಾನ್ಯ ಪ್ರದರ್ಶನ ಗಮನ ಸೆಳೆದವು. ರೈತರಿಗೆ ಸಂಬಂಧಿಸಿದ ನೃತ್ಯ ಪ್ರದರ್ಶನ ವಿಶೇಷವಾಗಿತ್ತು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾ–ರಿಗಳಾದ ಈಶ್ವರ ಕುಮಾರ್ ಕಾಂದೂ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯದ ಕುಲಪತಿ ಡಾ.ಎಂ.ಹನುಮಂತಪ್ಪ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಪ್ರಕಾಶ ಚೌಹಾಣ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತೇಗೇರಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಕೃಷಿ ಅಧಿಕಾ–ರಿಗಳು, ಕೃಷಿ ಪರಿಕರ ಮಾರಾಟಗಾರರು, ಕೃಷಿ ಪದವೀಧರ ವಿದ್ಯಾರ್ಥಿಗಳು ಇದ್ದರು.

# ಮಾ ಶಾರದಾ ದೇವಿ ಜಯಂತಿ ಆಚರಣೆ

❑ ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಸಿಂಧನೂರು ತಾಲೂಕಿನ RH No :4 ಮಾ ಶಾರದಾ ದೇವಿ ಅವರ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ನ್ಯೂ ಮಾ ಶಾರದಾ ಶಾಲೆಯು ತಮ್ಮ 17 ನೇ ವಾರ್ಷಿಕೋತ್ಸವವನ್ನು ಉತ್ಸಾಹದಿಂದ ಆಚ–ರಿಸಲಾಯಿತು... ಶಾಲೆಯ ಮಕ್ಕಳಿಗೆ ಮಾ ಶಾರದಾ ದೇವಿ ಹಾಗೂ ರಾಮಕೃಷ್ಣ ಪರಮಹಂಸ ಹಾಗೂ ಸ್ವಾಮಿ ವಿವೇಕಾನಂದರವರ ಉಡುಪುಗಳನ್ನು ತೊಡಿಸಿ ಜಾಥಾ ಮೂಲಕ ಮೆರವಣಿಗೆ ಮಾಡಿಸಲಾಯಿತು.**

.ನಂತರ ಈ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ. ನೀಲ್ ಕಮಲ್ ಸ್ವರ್ಣಕರ್ ರವರು ಪ್ರತಿ ವರ್ಷ ನಮ್ಮ ಶಾಲೆಯ ವತಿಯಿಂದ ಮಾ ಶಾರದಾದೇವಿಯರವರ ಜಯಂತಿ ಎಂದು ನಮ್ಮ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಪ್ರತಿವರ್ಷದಂತೆ ಹಮ್ಮಿಕೊಂಡಿದ್ದು ಮಾ ಶಾರದಾದೇವಿ 1853–1920 ಶ್ರೀರಾಮಕೃಷ್ಣರ ಪತ್ನಿ ಮತ್ತು ಆಧ್ಯಾತ್ಮಿಕ ಸಂಗಾತಿ, ರಾಮಕೃಷ್ಣ ಮಠ ಮತ್ತು ಮ?ಷನ್‌ಗಳ "ಸಂಘಮಾತೆ" ಎಂದು ಕರೆಯಲ್ಪಡುವವರು; ಬಂಗಾಳದ ಜಯರಾಮವಾಟಿ ಗ್ರಾಮದ ಬಡ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಇವರು, ತಮ್ಮ ಜೀವನವನ್ನು ಸೇವೆ, ತ್ಯಾಗ ಮತ್ತು ಆದ–,ತ್ಯಾತ್ಮಿಕತೆಗೆ ಅರ್ಪಿಸಿ, ಎಲ್ಲರ ತಾಯಿಯಂತೆ ಭಕ್ತ–ರಿಗೆ ಮಾರ್ಗದರ್ಶನ ನೀಡಿದರು, ಮಹಿಳೆಯ–ರಿಗಾಗಿ ಆದರ್ಶಪ್ರಾಯರಾಗಿ ನಿಂತರು.

ಇವರ ಜನನ 1853ರ ಡಿಸೆಂಬರ್ 22ರಂದು ಬಂಗಾಳದ ಜಯರಾಮವಾಟಿ ಗ್ರಾಮದಲ್ಲಿ ಜನಿಸಿದರು. ಅವರ ಬಾಲ್ಯದ ಹೆಸರು ಶಾರದಾಮಣಿ ಮುಖೋಪಾಧ್ಯಾಯ. ಶ್ರೀರಾಮಕೃಷ್ಣರೊಂದಿಗೆ ವಿವಾಹ: 5–6 ವರ್ಷದವರಿದ್ದಾಗ ಶ್ರೀರಾಮಕೃಷ್ಣರೊಂದಿಗೆ ವಿವಾಹವಾಯಿತು, ಆದರೆ ಇದು ಸಾಂಸಾರಿಕ ಸಂಬಂಧವಾಗಿರಲಿಲ್ಲ, ಆಧ್ಯಾತ್ಮಿಕ ಬಾಂಧವ್ಯವಾಗಿತ್ತು. ಆಧ್ಯಾತ್ಮಿಕ ಗುರು: ರಾಮಕೃಷ್ಣರ ಮಹಾಸಮಾಧಿಯ ನಂತರ, ಅವರ ಶಿಷ್ಯರ ಆಧ್ಯಾತ್ಮಿಕ ಮಾರ್ಗದರ್ಶಕಿಂ–ಯಾಗಿದ್ದರು. ಸನ್ಯಾಸಿ, ಗೃಹಸ್ಥ, ಬಡ, ಶ್ರೀಮಂತ – ಹೀಗೆ ಎಲ್ಲರಿಗೂ ತಾಯಿಯಂತೆ ವಾತ್ಸಲ್ಯ ನೀಡಿದರು.

ಭಗಿನಿ ನಿವೇದಿತಾ: ಭಗಿನಿ ನಿವೇದಿತಾ (ಮಾರ್ಗರೆಟ್ ಎಲಿಜಬೆತ್ ನೊಬಲ್) ಅವರಿಗೆ ಹಿಂದೂ ಧರ್ಮದ ದೀಕ್ಷೆ ನೀಡಿ, ಅವರ ಕಾರ್ಯಗಳಿಗೆ ಪ್ರೋತ್ಸಾಹ ನೀಡಿದರು. ಅವರು ಯಾವುದೇ ಪುಸ್ತಕ ಬರೆಯದಿದ್ದರೂ, ಅವರ ಮಾತುಗಳನ್ನು ಶಿಷ್ಯರು ದಾಖಲಿಸಿದ್ದಾರೆ. "ಶ್ಯಾಂತಿಗಾಗಿ ಇತರರಲ್ಲಿ ತಪ್ಪು ಹುಡುಕಬೇಡಿ, ನಿಮ್ಮ ತಪ್ಪುಗಳನ್ನು ನೋಡಿ" ಎಂಬುದು ಅವರ ಪ್ರಮುಖ ಬೋಧನೆಯಾಗಿದೆ. ಕರ್ನಾಟಕದೊಂದಿಗೆ ಸಂಬಂಧ 1911ರಲ್ಲಿ ಬೆಂಗಳೂರಿನ ಶ್ರೀರಾಮಕೃಷ್ಣ ಮಠಕ್ಕೆ ಭೇಟಿ ನೀಡಿ ಭಕ್ತರನ್ನು ಆಶೀರ್ವದಿಸಿದರು. ಅಲ್ಲಿ ಅವರು ಧ್ಯಾನ ಮಾಡಿದ ಸ್ಥಳ ಈಗ ಪವಿತ್ರ ತೀರ್ಥಕ್ಷೇತ್ರವಾಗಿದೆ. ಎಂದು ತಿಳಿಸಿದರು ನಂತರ ಶಾಲೆಯಲ್ಲಿ ಸಂಸ್ಕೃತಿ–ಕ ಕಾರ್ಯಕ್ರಮಗಳು ಹಮ್ಮಿಕೊಂಡಿದ್ದರು .. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು ಶಾಲೆಯ ಆಡಳಿತ ಮಂಡಳಿಯವರು, ಶಾಲೆಯ ಶಿಕ್ಷಕ ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಗ್ರಾಮಸ್ಥರು ಉಪಸ್ಥಿತರಿದ್ದರು





## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD (Naturopathy & Yoga)

MD (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ಅಥವಾ ಒಆ (ಕ್ಲಿನಿಕಲ್ ಯೋಗ ಚಿಕಿತ್ಸೆ) ಯೋಗದಲ್ಲಿ ಒಆ ಎಂದರೆ ಆಯುಷ್ (ಆಯುರ್ವೇದ, ಯೋಗ ಮತ್ತು ಪ್ರಕೃತಿಚಿಕಿತ್ಸೆ, ಯುನಾನಿ, ಸಿದ್ಧ, ಹೋಮಿಯೋಪತಿ) ಔಷಧದಲ್ಲಿ ಸ್ನಾತಕೋತ್ತರ ವಿಶೇಷತೆ, ಇದನ್ನು ಸಾಮಾನ್ಯವಾಗಿ ಒಆ (ಪ್ರಕೃತಿಚಿಕಿತ್ಸೆ ಮತ್ತು ಯೋಗ) ಅಥವಾ MD (ಕ್ಲಿನಿಕಲ್ ಯೋಗ ಚಿಕಿತ್ಸೆ) ಎಂದು ಕರೆಯಲಾಗುತ್ತದೆ, ಇದು ಯೋಗ ತತ್ವಗಳು, ತತ್ವಶಾಸ್ತ್ರ ಮತ್ತು ರೋಗ ನಿರ್ವಹಣೆಗೆ ಚಿಕಿತ್ಸಕ ಅನ್ವಯಿಕೆಗಳ ಮೇಲೆ ಕೇಂದ್ರೀಕರಿಸುತ್ತದೆ, ಅಂಗರಚನಾಶಾಸ್ತ್ರ, ಶರೀರಶಾಸ್ತ್ರ, ರೋಗಶಾಸ್ತ್ರ ಮತ್ತು ಸಂಶೋಧನೆಯಂತಹ ಮೂಲಭೂತ ವೈದ್ಯಕೀಯ ವಿಷಯಗಳೊಂದಿಗೆ ಸಂಯೋಜಿಸುತ್ತದೆ, ಸಾಮಾನ್ಯವಾಗಿ ಪ್ರವೇಶಕ್ಕಾಗಿ BNYS (ಪ್ರಕೃತಿಚಿಕಿತ್ಸೆ ಮತ್ತು ಯೋಗ ವಿಜ್ಞಾನಗಳ ಪದವಿ) ಅಥವಾ ಸಮಾನ ವೈದ್ಯಕೀಯ ಪದವಿಯ ಅಗತ್ಯವಿರುತ್ತದೆ. ಪ್ರಮುಖ ವಿಷಯಗಳಲ್ಲಿ ಯೋಗ ತತ್ವಶಾಸ್ತ್ರ, ಚಿಕಿತ್ಸಕ ಯೋಗ, ಪೋಷಣೆ, ಜಲಚಿಕಿತ್ಸೆ, ಅಕ್ಯುಪ್ರೆಶರ್ ಮತ್ತು ಕ್ಲಿನಿಕಲ್ ಪ್ರಕೃತಿಚಿಕಿತ್ಸೆ ಸೇರಿವೆ, ಇದು ಜೀವನಶೈಲಿ ಔಷಧಕ್ಕಾಗಿ ವೈದ್ಯರನ್ನು ಸಿದ್ಧಪಡಿಸುತ್ತದೆ. ಮೂಲಭೂತ ಔಷಧ: ಅಂಗರಚನಾಶಾಸ್ತ್ರ, ಶರೀರಶಾಸ್ತ್ರ, ಜೀವರಸಾಯನಶಾಸ್ತ್ರ, ರೋಗಶಾಸ್ತ್ರ, ಔಷಧಶಾಸ್ತ್ರ.ಯೋಗ ಮತ್ತು ತತ್ವಶಾಸ್ತ್ರ: ಯೋಗ ಪಠ್ಯಗಳು (ಯೋಗ ಸೂತ್ರಗಳು, ಭಗವದ್ಗೀತೆ), ಯೋಗದ ತತ್ವಗಳು, ರಾಜಯೋಗ, ಭಕ್ತಿ ಯೋಗ, ಕರ್ಮ ಯೋಗ.ಚಿಕಿತ್ಸಕ ಅನ್ವಯಿಕೆಗಳು: ಚಿಕಿತ್ಸಕ ಯೋಗಾಭ್ಯಾಸಗಳು (ಆಸನಗಳು, ಪ್ರಾಣಾಯಾಮ, ಧ್ಯಾನ), ದೀರ್ಘಕಾಲದ ಕಾಯಿಲೆಗಳಿಗೆ ಯೋಗ ಚಿಕಿತ್ಸೆ, ಜೀವನಶೈಲಿ ಔಷಧ. ಪ್ರಕೃತಿಚಿಕಿತ್ಸಾ ವಿಧಾನಗಳು: ಪೋಷಣೆ ಮತ್ತು ಆಹಾರ ಪದ್ಧತಿ, ಜಲಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಮಸಾಜ್ ಚಿಕಿತ್ಸೆ, ಅಕ್ಯುಪಂಕ್ಚರ್/ಆಕ್ಯುಪ್ರೆಶರ್. ಕ್ಲಿನಿಕಲ್ ಕೌಶಲ್ಯಗಳು: ಕ್ಲಿನಿಕಲ್ ಪ್ರಕೃತಿಚಿಕಿತ್ಸೆ, ಸುಧಾರಿತ ರೋಗನಿರ್ಣಯ, ಸಂಶೋಧನಾ ವಿಧಾನ, ಮನೋವಿಜ್ಞಾನ ಮತ್ತು ಸಮಾಲೋಚನೆ. ಬಿಎನ್‌ವೈಎಸ್ (ಬ್ಯಾಚುಲರ್ ಆಫ್ ನೇಚರೋಪತಿ & ಯೋಗಿಕ್ ಸೈನ್ಸಸ್) ಪದವೀಧರರು. ಯೋಗ ಬೋಧಕರ ಕೋರ್ಸ್ (ಜಖಅ) ಪೂರ್ಣಗೊಳಿಸಿದ ನಂತರ ಯೋಗದಲ್ಲಿ ಎಂಡಿ ನೀಡುತ್ತಿರುವ ಉನ್ನತ ಕಾಲೇಜುಗಳು (ಭಾರತ)ವೈದ್ಯಕೀಯ ವಿಜ್ಞಾನ ಸಂಸ್ಥೆ, BHU (ವಾರಣಾಸಿ)ಎಸ್-ವ್ಯಾಸ ವಿಶ್ವವಿದ್ಯಾಲಯ (ಬೆಂಗಳೂರು) ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜು (ಮೂಡುಬಿದಿರೆ)ಭಾರತಿ ವಿದ್ಯಾಪೀಠ ಡೀಮ್ಡ್ ವಿಶ್ವವಿದ್ಯಾಲಯ (ಪುಣೆ) ಸೂರ್ಯೋದಯ ವಿಶ್ವವಿದ್ಯಾಲಯ (ಆಲ್ವಾರ್)

## ರಾಯಚೂರು ಉತ್ಸವಕ್ಕೆ ಸಿದ್ಧತೆ ಈ ಕ್ಷಣದಿಂದಲೇ ಆರಂಭವಾಗಲಿ; ಜಿಲ್ಲಾಧಿಕಾರಿ ನಿತೀಶ್ ಕೆ. ನಿರ್ದೇಶನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 22 (ಕರ್ನಾಟಕ ವಾರ್ತೆ): ಬಹುವರ್ಷಗಳ ನಂತರ ಜಿಲ್ಲೆಯಲ್ಲಿ 2026ರ ಜನವರಿ 29, 30 ಹಾಗೂ 31ರಂದು ಮೂರು ದಿನಗಳ ಕಾಲ ರಾಯಚೂರು ಉತ್ಸವ ನಿಗದಿಯಾಗಿದೆ. ಈ ಉತ್ಸವ ರಾಯಚೂರು ನಗರಕ್ಕಷ್ಟೇ ಸೀಮಿತವಲ್ಲ; ಇಡೀ ಜಿಲ್ಲೆಯ ಉತ್ಸವವಾಗಿದೆ.**





ಜಿಲ್ಲೆಯಲ್ಲಿನ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಒಗ್ಗೂಡಿ ಮಾಡಬೇಕಾದ ಕಾರ್ಯಕ್ರಮವಾಗಿದ್ದು, ಸಿದ್ದತಾ ಕಾರ್ಯವು ಇಂದಿನಿಂದಲೇ, ಈ ಕ್ಷಣದಿಂದಲೇ ಆರಂಭವಾಗಬೇಕು ಎಂದು ರಾಯಚೂರು ಉತ್ಸವದ ಸ್ವಾಗತ ಮತ್ತು ಶಿಷ್ಟಾಚಾರ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಡಿಸೆಂಬರ್ 22ರ ಸೋಮವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಉತ್ಸವ-26ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಉತ್ಸವದ ಎಲ್ಲ ಕೆಲಸ-ಕಾರ್ಯಗಳ ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಉತ್ಸವದ ಮೊದಲನೇ ಸಭೆಯ ಪೂರ್ವದಲ್ಲಿಯೇ ನಾವು ಸಮಿತಿಗಳನ್ನು ರಚಿಸಿದ್ದೇವೆ. ಆಯಾ ಸಮಿತಿಗಳು ನಿರ್ವಹಿಸಬೇಕಾದ ಕಾರ್ಯಗಳನ್ನು ಪಟ್ಟಿ ಮಾಡಿದ್ದೇವೆ. ಅದರಂತೆ ಎಲ್ಲ ಕೆಲಸ ಕಾರ್ಯಗಳು ಅಚ್ಚುಕಟ್ಟಾಗಿ ನಡೆಯಬೇಕು ಎಂದು ಸೂಚನೆ ನೀಡಿದರು. ಉತ್ಸವ ಮೂರು ದಿನಗಳ ಕಾಲ ಅದ್ದೂರಿ ಆಗಿ ನಡೆಯಬೇಕು. ರಾಯಚೂರು ಸಿಟಿ ಜೊತೆಗೆ ದೇವದುರ್ಗ, ಸಿರವಾರ, ಅರಕೇರಾ, ಲಿಂಗಸಗೂರು, ಮಸ್ಕಿ, ಸಿಂಧನೂರ, ಮಾನವಿ ಸೇರಿದಂತೆ ಎಲ್ಲ ತಾಲೂಕಿನ ಜನತೆ ಉತ್ಸವದಲ್ಲಿ ಭಾಗಿಯಾಗಬೇಕು. ಇದಕ್ಕಾಗಿ ಈಗಿನಿಂದಲೇ ಬಸ್ ಗಳ ವ್ಯವಸ್ಥೆಗೆ ಯೋಜನೆ ರೂಪಿಸಬೇಕು.

ಮುಖ್ಯವಾಗಿ ಪೊಲೀಸ್ ಇಲಾಖೆಯು ಈಗಿನಿಂದಲೇ ಜಾಗೃತಿ ವಹಿಸಿ ಜನವರಿ 29, 30 ಹಾಗೂ 31ರಂದು ಅದ್ದೂರಿಯಾಗಿ ಜರುಗುವ ಕಾರ್ಯಕ್ರಮದಲ್ಲಿ ಯಾವುದೇ ರೀತಿಯ ಅವಘಡಗಳಾಗಿ ಜಿಲ್ಲೆಯ ಹೆಸರು ಕೆಡದಂತೆ ಜಣಸಂದಣಿ ನಿರ್ವಹಣೆಗೆ ಶಿಸ್ತುಬದ್ಧ ಯೋಜನೆ ರೂಪಿಸಬೇಕು. ವಾಹನಗಳ ಪಾರ್ಕಿಂಗೆ ಮಾರ್ಗಸೂಚಿ ರೂಪಿಸಿ ವಾಹನ ಮತ್ತು ಜನ ಸಂಚಾರಕ್ಕೆ ಸುಗಮ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಪೊಲೀಸ್ ಇಲಾಖೆಗೆ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್ ಸಿಇಓ ಈಶ್ವರ ಕಾಂದೂ ಮಾತನಾಡಿ, ಜಿಲ್ಲಾ ಉತ್ಸವವು ಅರ್ಥಪೂರ್ಣವಾಗಿ ಹಾಗೂ ವ್ಯವಸ್ಥಿತವಾಗಿ ನಡೆಯಲು ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು, ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಹಿಸಿದ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಸೂಚನೆ ನೀಡಿದರು.

ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಮಾತನಾಡಿ, ಅಧಿಕಾರಿಗಳು ಮತ್ತು ಸಿಬ್ಬಂದಿ ಜಾಗೃತೆಯಿಂದ ಕೆಲಸ ಮಾಡಬೇಕು. ಗೊಂದಲಗಳಿದ್ದರೆ ಕೇಳಿ ಈಗಿನಿಂದಲೇ ಕೆಲಸ ಆರಂಭಿಸಬೇಕು. ಯಾರು ಸಹ ನಿರ್ಲಕ್ಷ್ಯ ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಸ್ವಾಗತ ಮತ್ತು ಶಿಷ್ಟಾಚಾರ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಮಾತನಾಡಿ, ಆಯಾ ಸಮಿತಿಗಳ ವಿವರ, ನೇಮಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವಿವರ ಹಾಗೂ ಕೆಲಸದ ಹಂಚಿಕೆಯ ವಿವರದ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ಬಸವಣ್ಣೆಪ್ಪ ಕಲಶೆಟ್ಟಿ, ಪಾಲಿಕೆಯ ಸಮಿತಿ ಕಾರ್ಯದರ್ಶಿ ಶ್ರೀ ಕೃಷ್ಣ ಶಾವಂತಗೇರಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಈರಣ್ಣ, ಮಹಾನಗರ ಪಾಲಿಕೆಯ ಉಪ ಆಯುಕ್ತರಾದ ಸಂತೋಷರಾಣಿ, ಆಯಾ ತಾಲೂಕಿನ ತಹಸೀಲ್ದಾರರು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

## ಸಸ್ಯೋದ್ಯಾನ ನಿರ್ಮಾಣಕ್ಕಾಗಿ ಶಾಸಕರಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದಲ್ಲಿ ಟ್ರೀ ಪಾರ್ಕ್( ಸಸ್ಯೋದ್ಯಾನ) ನಿರ್ಮಾಣ ಹಾಗೂ ಉದ್ಯಾನಗಳ ಅಭಿವೃದ್ಧಿಗೆ ನೆರವಾಗುವಂತೆ ಒತ್ತಾಯಿಸಿ ಹಸಿರು ಸಂಪದ ಬಳಗದ ವತಿಯಿಂದ ಶಾಸಕ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರಾದ ಶ್ರೀ ಸಿ ಎಸ್ ನಾಡಗೌಡ (ಅಪ್ಪಾಜಿ) ರವರಿಗೆ ಮನವಿ ಅರ್ಪಿಸಲಾಯಿತು.**



ಸುಂದರ ಹಾಗೂ ಹಸಿರುಮಯ ನಗರವನ್ನು ಮಾಡುವ ಮನವಿಯನ್ನು ಸ್ವೀಕರಿಸಿ ಮಾತನಾಡಿದ ಸನ್ಮಾನ್ಯ ಶಾಸಕರು ಶೀಘ್ರದಲ್ಲಿಯೇ ಇದಕ್ಕೆ ಸೂಕ್ತ ಪರಿಹಾರವನ್ನು ಒದಗಿಸಲಾಗುವುದು ಎಂದು ಭರವಸೆ ನೀಡಿದರು. ಈ ಸಂಧರ್ಭದಲ್ಲಿ ಬಳಗದ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ ಸಹಕಾರ್ಯದರ್ಶಿ, ಹಾಗೂ ಇತರೆ ಗೌರವಾನ್ವಿತ ಸದಸ್ಯರು ಉಪಸ್ಥಿತರಿದ್ದರು.

## ರಾಮಲಿಂಗಯ್ಯ ಶ್ರೀಗಳಿಗೆ ಗೌರವ ಸಮರ್ಪಣೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಚಬನೂರ ಗ್ರಾಮದಲ್ಲಿ ಸಿದ್ಧಿ ಪುರುಷ ಲಿಂಗೈಕ್ಯ ರಾಮಲಿಂಗೇಶ್ವರ ನೂತನ ಮಠ ಹಾಗೂ ಕಲ್ಯಾಣ ಮಂಟಪ ಉದ್ಘಾಟನಾ ಸಮಾರಂಭದ ಪೂರ್ವಭಾವಿ ಸಭೆಯಲ್ಲಿ ಜ್ಯೋತಿಷ್ಯ ರತ್ನ ಪರಮಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳಿಗೆ ಮುಖಂಡ ಬಸನಗೌಡ ಪಾಟೀಲ ಯಡಿಯಾಪೂರ ಅವರು ಗೌರವ ಸಮರ್ಪಣೆ ಸಲ್ಲಿಸಿದರು.**



ನಾವದಗಿ ಬ್ರಹನ್ಮಠದ ಷ.ಬ್ರ. ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರು, ಕೊಡೆಕಲ್ಲದ ಶಿವಕುಮಾರ ಮಹಾಸ್ವಾಮಿಗಳು, ದೇವರ ಹಿಪ್ಪರಗಿ ಪರದೇಶಿ ಮಠದ ಶಿವಯೋಗಿ ಶಿವಾಚಾರ್ಯರು ಹಾಗೂ ಹಲವಾರು ಮುಖಂಡರು ಇದ್ದರು.

## ಸ್ವಯಂ ಸೇವಕರಾಗಲು ನೋಂದಾಯಿಸಿ :ಶ್ರೀ ಗವಿಸಿದ್ಧೇಶ್ವರ ಜಾತ್ರೆ



❑ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಡಿ 22 ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ ಈ ನಾಡಿನ ಜನರ ಭಕ್ತಿಯ ನಿತ್ಯೋತ್ಸವ. ಜಾತ್ರಾ ಕೇವಲ ಧಾರ್ಮಿಕ ಕಾರ್ಯಕ್ರಮವಾಗಿರದೆ ಪ್ರತಿವರ್ಷ ವಿನೂತನ ಕಾರ್ಯಯೋಜನೆ ರೂಪಿಸಿ ಅದನ್ನು ಅನುಷ್ಠಾನ ಗೊಳಿಸುತ್ತಿರುವುದು ತಮಗೆಲ್ಲ ವೇದ್ಯವಾಗಿದೆ.**

ಜಾತ್ರಾ ಮಹೋತ್ಸವದಲ್ಲಿ ವರ್ಷದಿಂದ ವರ್ಷಕ್ಕೆ ಭಕ್ತರ ಸಂಖ್ಯೆ ಗಣನೀಯವಾಗುತ್ತಿರುವ ಹಿನ್ನಲೆಯಲ್ಲಿ ಸ್ವ-ಇಚ್ಛೆಯಿಂದ ಸೇವೆಸಲ್ಲಿಸುವ ಆಸಕ್ತ ಭಕ್ತಗಣ ಹೆಸರು ನೊಂದಾಯಿಸಲು ಕೋರಲಾಗಿದೆ. ನೊಂದಾಯಿಸುವ ಮೊಬೈಲ್ ಸಂಖ್ಯೆ: 9844634990 ಸೇವೆ ಸಲ್ಲಿಸುವ ವಿಭಾಗಗಳು 1) ಸ್ವಚ್ಛತಾ ಸೇವೆ: 1. ಮಹಾರಥೋತ್ಸವದ ಮೈಧಾನ,2. ಶ್ರೀ ಮಠದ ರಸ್ತೆ3. ಮಹಾದಾಸೋಹದ ರಸ್ತೆ4. ಮಠದ ಆವರಣ5. ಮಹಾದಾಸೋಹ ಆವರಣ6. ಕೈಲಾಸ ಮಂಟಪ7. ಪ್ರಸಾದ ತಯಾರಿಸುವ ಸ್ಥಳ8. ಜಾತ್ರಾ ಅಂಗಡಿ ಸ್ಥಳ2) ಮಹಾದಾಸೋಹ ಸೇವೆ:1. ತರಕಾರಿ ಹೆಚ್ಚುವುದು2. ಪ್ರಸಾದ ತಯಾರಿಸುವುದು3. ಪ್ರಸಾದ ಬಡಿಸುವುದು4. ಅಡುಗೆ ಸಾಮಾನು ತೊಳೆಯುವುದು.

5. ರೊಟ್ಟಿ ಸಂಗ್ರಹಿಸುವುದು6. ಕಟ್ಟಿಗೆ ಹೊರುವುದು(ಪ್ರಸಾದತಯ್ಯಾರಿಸುವ ಸ್ಥಳಕ್ಕೆ ತರುವುದು)7. ಕಟ್ಟಿಗೆ ಒಡೆಯುವುದು3) ಶಿಸ್ತು ಕರ್ತವ್ಯ ಸೇವೆ:1) ಜಾತ್ರ ಆವರಣದಲ್ಲಿ ಶಿಸ್ತು ಕಾಪಾಡುವುದು2) ಮಹಾದಾಸೋಹದಲ್ಲಿ ಶಿಸ್ತು ಕಾಪಾಡುವುದು3) ವಾಹನಗಳ ನಿಲುಗಡೆ4) ಯಾತ್ರಿಗಳಿಗೆ ಸಣ್ಣಪುಟ್ಟ ಅಂಗಡಿಗಳಿಂದ ತೊಂದರೆಯಾಗದಂತೆ ನೋಡುವುದು.5) ಜಾತ್ರಾ ಅಂಗಡಿಗಳ ಶಿಸ್ತು ಕಾಪಾಡುವುದು.4) ದಾಸ್ತಾನು ಸಂಗ್ರಹಣೆ ಸೇವೆ:1) ದವಸದಾನ್ಯ ಸಂಗ್ರಹಿಸುವಲ್ಲಿ ಸಹಾಯ ಮಾಡುವುದು.5) ಇತರ ಸೇವೆ :1) ಶ್ರೀಮಠವು ಒಪ್ಪಿಸುವ ಯಾವುದೇ ಸೇವೆಗೆ ಸಿದ್ಧರಿರುವುದು.ಈ ಮೇಲ್ಕಾಣಿಸಿದ ಸೇವೆಗಳಿಗೆ ಸಿದ್ಧವಿರುವ ಆಸಕ್ತಉರು/ಸಂಘ ಸಂಸ್ಥೆ/ ಇಲಾಖೆಯ ಭಕ್ತರು ಮಾಹಿತಿಯನ್ನು ಕಳುಹಿಸಬೇಕಾಗಿ ಕೋರಲಾಗಿದೆ.

## ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಕ್ಕೆ ತೆರೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿ 22 ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ವತಿಯಿಂದ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗ ಮಂದಿರದಲ್ಲಿ ಎರಡು ದಿನಗಳ ವರೆಗೆ ಅಚ್ಚುಕಟ್ಟಾಗಿ ನಡೆದ 11ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನಕ್ಕೆ ತೆರೆ ಬಿದ್ದಿತು. ನೂರಾರು ದಲಿತ ಸಾಹಿತಿಗಳು, ಕವಿಗಳು ಹಾಗೂ ಸಾಹಿತ್ಯಾಸಕ್ತರು ಸಮ್ಮೇಳನಕ್ಕೆ ಸಾಕ್ಷಿಯಾದರು. ಯಾವುದೇ ಗೌಜು ಗದ್ದಲ, ವಿವಾದಗಳಿಗೆ ಆಸ್ಪದ ಮಾಡಿಕೊಡದೇ ಎರಡು ದಿನಗಳ ವರೆಗೆ ಸರಳವಾಗಿ ನಡೆಯಿತು. ಸಮಾಜ ಕಲ್ಯಾಣ ಇಲಾಖೆಯ ಭವನದಲ್ಲಿ ಸಾರ್ವಜನಿಕರಿಗೆ ಊಟ ಹಾಗೂ ಉಪಾಹಾರದ ವ್ಯವಸ್ಥೆ ಮಾಡಿದ್ದರಿಂದ ಹೊರ ಜಿಲ್ಲೆಗಳಿಂದ ಬಂದಿದ್ದ ಸಾಹಿತ್ಯ ಆಸಕ್ತರಿಗೂ ಯಾವುದೇ ರೀತಿಯ ಸಮಸ್ಯೆ ಎದುರಾಗಲಿಲ್ಲ.**




ವಾಹನ ನಿಲುಗಡೆಗೂ ಸರಿಯಾದ ವ್ಯವಸ್ಥೆ ಮಾಡಿದ್ದರಿಂದ ಸಂಚಾರ ಒತ್ತಡ ಕಂಡು ಬರಲಿಲ್ಲ. ಪೊಲೀಸ್ ಅಧಿಕಾರಿಗಳು ಅಲ್ಲಲ್ಲಿ ಬ್ಯಾರಿಕೇಡ್ ಅಳವಡಿಸಿದ್ದರಿಂದ ಪಾರ್ಕಿಂಗ್ ಸಮಸ್ಯೆ ಕಾಡಲಿಲ್ಲ. ಸಮ್ಮೇಳನದ ಹಿನ್ನೆಲೆಯಲ್ಲಿ ರಿಯಾಯಿತಿ ಘೋಷಿಸಿದ್ದರಿಂದ ಸಾಹಿತ್ಯಾಸಕ್ತರು ಅನೇಕ ಪುಸ್ತಕಗಳನ್ನು ಖರೀದಿಸಿ ಮನೆಗಳತ್ತ ಹೆಜ್ಜೆ ಹಾಕಿದರು. ಸಮ್ಮೇಳನದ ಸಮಾರೋಪ ಸಮಾರಂಭದ ನೇತೃತ್ವನ್ನು ಬೀದರ್‌ನ ಬೌದ್ಧ ವಿಹಾರದ ವರಜ್ಯೋತಿ ಭಂತೇಜಿ ವಹಿಸಿದ್ದರು.. ಸರ್ವಾಧ್ಯಕ್ಷತೆ ಸಾಹಿತಿ ಜಯದೇವಿ ಗಾಯಕವಾಡ ಮಾತನಾಡಿದರು. ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ ಗೊಳಸಂಗಿ ಅಧ್ಯಕ್ಷತೆ ವಹಿಸಿದ್ದರು. ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ, ಡಿಎಸ್‌ಎಸ್ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ ಸಮಾರೋಪ ಭಾಷಣ ಮಾಡಿದರು.

ಸಾಧಕರಿಗೆ ಸನ್ಮಾನ: ಸಮಾರೋಪ ಸಮಾರಂಭದಲ್ಲಿ 64 ಸಾಧಕರು ಹಾಗೂ ದಲಿತ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ ಸನ್ಮಾನ ಮಾಡಲಾಯಿತು. ಸಮ್ಮೇಳನಾಧ್ಯಕ್ಷೆ ಜಯದೇವಿ ಗಾಯಕವಾಡ ಹಾಗೂ ಗವಿಸಿದ್ದಪ್ಪ ಪಾಟೀಲ ದಂಪತಿಯನ್ನು ಪರಿಷತ್ತಿನ ವತಿಯಿಂದ ಸತ್ಕರಿಸಲಾಯಿತು. ಚಿಕ್ಕಮಗಳೂರಿನ ಭಕ್ತನಕಟ್ಟೆ ಲೋಕೇಶ ಹೋರಾಟದ ಗೀತೆ, ಹಾವೇರಿಯ ಕಾವೇರಿ ಹೊನ್ನತ್ತಿ ಹಾಗೂ ಸಂಗಡಿಗರು ಸಮತಾ ಗೀತೆ, ರಾಯಚೂರಿನ ಕ್ರಾಂತಿಕಾರಿ ಸಾಂಸ್ಕೃತಿಕ ವೇದಿಕೆ, ಗದಗನ ಕೃಷ್ಣಾ ಮೆಲೊಡಿಯಸ್ ಹಾಗೂ ಬೆಂಗಳೂರಿನ ಭೀಮಜಿ ಕೃಷ್ಣಮೂರ್ತಿ ಕಲಾ ತಂಡದ ಕಲಾವಿದರು ಅಂಬೇಡ್ಕರ್ ಗೀತೆಗಳನ್ನು ಹಾಡಿ ಪ್ರೇಕ್ಷಕರ ಮನ ರಂಜಿಸಿದರು.

ಅತಿಥಿಗಳಾಗಿ ಅಮರೇಶ ಬಲ್ಲಿದವ, ಶಾಂತವೀರ, ಹಾಲಬಸಪ್ಪ ಪೂಜೇರಿ, ಡಿ. ಎಚ್.ಪೂಜಾರ, ಚಿದಾನಂದಪ್ಪ ಕುರಿ, ಮಹೇಶ ಎ.ಇ, ಚಂದ್ರಶೇಖರ ಭೇರಿ, ರವೀಂದ್ರ ಜಲ್ದಾರ್ ಹಾಗೂ ವಿಜಯೇಂದ್ರ, ದಸಾಪ ಜಿಲ್ಲಾ ಘಟಕದ ಅಧ್ಯಕ್ಷ ತಾಯರಾಜ ಮರ್ಚಟ್ಹಾಳ, ಪರಿಷತ್ತಿನ ಪದಾಧಿಕಾರಿಗಳಾದ ಎಚ್.ಬಿ.ಕೋಲ್ಕಾರ್, ವೈ-ಎಂ.ಭಜಂತ್ರಿ, ಚಂದ್ರಗುಪ್ಪ, ಸುಜಾತಾ ಚಲವಾದಿ, ಗಣಪತಿ ಚಲವಾದಿ, ಗಾಂಧೀಜಿ ಮೊಳಕೇರಿ. ಹುಸೇನಪ್ಪ ಅಮರಾಪುರ, ಕರಿಗೂಳಿ ಸಂಕೇಶ್ವರ, ಶರಣಪ್ಪ ಚಲವಾದಿ, ಪಾರ್ಥ ಸಿರವಾರ, ಶಾಂತಾ ಆಂಜನೇಯ ಉಪಸ್ಥಿತರಿದ್ದರು.

## ಗ್ಯಾರಂಟಿ ಯೋಜನೆಗಳಿಂದ ಜನತೆಗೆ ಅನುಕೂಲ: ಎಸ್.ಆರ್.ಮೆಹರೋಜ್ ಖಾನ್

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 22 (ಕರ್ನಾಟಕ ವಾರ್ತೆ): ರಾಜ್ಯ ಸರ್ಕಾರದ ಗೃಹ ಲಕ್ಷ್ಮಿ, ಯುವನಿಧಿ, ಅನ್ನಭಾಗ್ಯ, ಗೃಹ ಜ್ಯೋತಿ ಹಾಗೂ ಶಕ್ತಿ ಯೋಜನೆಗಳು ಸಮಾಜದಲ್ಲಿನ ಎಲ್ಲ ವರ್ಗದ ಜನರ ಆರ್ಥಿಕ ಸಬಲತೆಗೆ ಕಾರಣವಾಗಿವೆ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್. ಆರ್.ಮೆಹರೋಜ್ ಖಾನ್ ಅವರು ಹೇಳಿದರು.**





ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯ ಮಿಷನ್ ಹಾಗೂ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಕಲಬುರಗಿ ವಿಭಾಗದ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ರಾಯಚೂರಿನ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಇವರ ಸಂಯುಕ್ತಾಶ್ರದಲ್ಲಿ ಯುನನಿಧಿ ಯೋಜನೆ ಸೇರಿದಂತೆ ಐದು ಗ್ಯಾರಂಟಿ ಯೋಜನೆಗಳು ಸಮಾಜದಲ್ಲಿ ಉಂಟು ಮಾಡಿರುವ ಧನಾತ್ಮಕ ಪರಿಣಾಮಗಳ ಕುರಿತು ಡಿಸೆಂಬರ್ 22ರ ಸೋಮವಾರ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿ ನಡೆದ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಬಡಜನರ ಕಲ್ಯಾಣಕ್ಕಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಕನಸುಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿದೆ. ಸಮಾಜದಲ್ಲಿನ ಯುವ ಸಮೂಹ ಸೇರಿದಂತೆ ಎಲ್ಲರಿಗೂ ಗ್ಯಾರಂಟಿ ಯೋಜನೆಗಳು ಬಹಳ ಅನುಕೂಲವಾಗಿವೆ. ಈ ಯೋಜನೆಗಳಿಂದ ರಾಜ್ಯದ ಜನರ ಜೀವನಮಟ್ಟ ಸುಧಾರಣೆಯಾಗಿದೆ. ಮುಖ್ಯವಾಗಿ ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದಾರೆ. ಬಡಜನತೆಗೆ ಈ ಯೋಜನೆಗಳು ಬಹಳ ಸಹಕಾರಿಯಾಗಿವೆ ಎಂದರು. ವಿದ್ಯಾರ್ಥಿಗಳೊಂದಿಗೆ ಸಂವಾದ: ಎಸ್.ಆರ್. ಮೆಹರೋಜ್ ಖಾನ್ ಅವರು ಇದೆ ವೇಳೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಯುವನಿಧಿ ಯೋಜನೆಯ ಸಹಾಯಧನದಿಂದ ಕಾನೂನು ಪದವಿ ಓದುತ್ತಿದ್ದು, ಇದೆ ರೀತಿ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಟ್ಟದಲ್ಲಿ ಸೌಲಭ್ಯ ಒದಗಿಸಬೇಕೆಂದು ಕಾನೂನು ಪದವಿ ವಿದ್ಯಾರ್ಥಿ ಶಿವಪ್ಪ ಸಲಹೆ ಮಾಡಿದರು.

ಗೃಹಲಕ್ಷ್ಮಿ ಯೋಜನೆಯ ಸಹಾಯಧನವು ಸಕಾಲಕ್ಕೆ ಸಿಗುವ ಹಾಗೆ ನೋಡಿಕೊಳ್ಳಬೇಕು ಎಂದು ಕೃಷಿ ವಿವಿಯ ವಿದ್ಯಾರ್ಥಿನಿ ಪಾವನಿ ಜೀವಿ ತಿಳಿಸಿದರು. ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ಸ್ವಾವಲಂಬನೆ ಜೀವನ ನಡೆಸುತ್ತಿದ್ದಾರೆ. ಅನೇಕ ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದು ರಾಯಚೂರಿನ ವಡ್ಲೂರಿನ ಮಹೇಶ್ವರಿ ಅವರು ತಿಳಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸದಸ್ಯರು ಹಾಗೂ ಪ್ರಾದೇಶಿಕ ಅಸಮತೋಲನ ತಜ್ಞರಾದ ಡಾ.ರಝಾಕ್ ಉಸ್ತಾದ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಕೃಷಿ ವಿವಿಯ ಕುಲಪತಿಗಳಾದ ಡಾ.ಎಂ.ಹನುಮಂತಪ್ಪ, ಆಡಳಿತ ಅಧಿಕಾರಿ ಜಾಗೃತಿ ದೇಶಪಾಂಡೆ, ಜಿಲ್ಲಾ ಪಂಚಾಯತ ಮುಖ್ಯ ಯೋಜನಾ ನಿರ್ದೇಶಕರಾದ ಡಾ.ಟಿ.ರೋಣಿ, ಸಿಡಾಕ್ ಜಂಟಿ ನಿರ್ದೇಶಕರಾದ ಜಿ.ಯು.ಹುಡೇದ್ ಸೇರಿದಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರು, ಸದಸ್ಯರು ಹಾಗೂ ವಿದ್ಯಾರ್ಥಿಗಳು ಸಭೆಯಲ್ಲಿದ್ದರು.